# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಆಗಸ್ಟ್ 06, 2024

ಸಂಪುಟ : 51 ಸಂಚಿಕೆ : 84 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಮುಕ್ತ ಚರ್ಚೆಗೆ ಸಿದ್ಧ; ಪೀಠಕ್ಕೆ ಅಂಟಿಕೊಂಡಿಲ್ಲ

### ಕೋರ್ಟ್‌ನಲ್ಲಿ ಕೇಸ್ ವಾಪಸ್ ಪಡೆದು ಮಠಕ್ಕೆ ಚರ್ಚೆಗೆ ಬರಲಿ : ತರಳಬಾಳು ಜಗದ್ಗುರುಗಳು



ಸಿರಿಗೆರೆ, ಆ. 5 - ತರಳಬಾಳು ಬೃಹನ್ಮಠ ಸಿರಿಗೆರೆ ಮತ್ತು ಶಾಖಾ ಮಠ ಸಾಣೇಹಳ್ಳಿ ಪೀಠಕ್ಕೆ ಉತ್ತರಾಧಿಕಾರಿಗಳ ನೇಮಕ ಸಂಬಂಧ ದಾವಣಗೆರೆಯಲ್ಲಿ ನಿನ್ನೆ ನಡೆದ ಸಾದರ ಲಿಂಗಾಯತ ಒಕ್ಕೂಟದ ಸಭೆ ಹಿನ್ನೆಲೆಯಲ್ಲಿ ಸಿರಿಗೆರೆಯ ತರಳಬಾಳು ಬೃಹನ್ಮಠದಲ್ಲಿ ಇಂದು ಭಕ್ತರ ಸಮ್ಮುಖದಲ್ಲಿ ಮಹತ್ವದ ಸಭೆ ನಡೆಯಿತು.

ಸಭೆಯಲ್ಲಿ ಸೇರಿದ್ದ ಭಕ್ತರು ತರಳಬಾಳು ಬೃಹನ್ಮಠದ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪರ ಘೋಷಣೆಗಳನ್ನು ಹಾಕಿದರಲ್ಲದೇ, ದಾವಣಗೆರೆಯಲ್ಲಿ ನಡೆದ ಸಭೆಗೆ ಧಿಕ್ಕಾರ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ನಿನ್ನೆಯ ಸಭೆಯನ್ನು ವಿರೋಧಿಸಿ ಶ್ರೀಗಳು ಕರೆ ಕೊಡದಿದ್ದರೂ ಸಮಾಜದ ಮುಖಂಡರ ಕರೆಗೆ ಇಷ್ಟೊಂದು ಸಂಖ್ಯೆಯಲ್ಲಿ ಬಂದಿದ್ದೀವೆ. ಶ್ರೀಗಳು ಯಾರ ಬೆದರಿಕೆಗೂ ಅಂಜಬೇಕಿಲ್ಲ. ಮಠದ ಜತೆ ನಾವಿದ್ದೇವೆ. ನೀವೇ ಮುಂದುವರಿಯಬೇಕು ಎಂದು ಜಗದ್ಗುರುಗಳನ್ನು ಭಕ್ತರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಪೀಠಕ್ಕೆ ನಾವು ಅಂಟಿಕೊಂಡು ಕುಳಿತಿಲ್ಲ. ಧರ್ಮ, ಕಾನೂನು ಪಾಲನೆ ಮಾಡುವ ಸಲುವಾಗಿ ನಾನು ಮುಂದುವರೆಯುತ್ತಿದ್ದೇನೆ. ಭಕ್ತರ ಇಚ್ಛೆಯಂತೆ ನಿರ್ಧಾರ ಕೈಗೊಳ್ಳುತ್ತೇವೆ. ಕೆಲವರು ಡೀಡ್ ವಿಚಾರ ಸಂಬಂಧ ಕೋರ್ಟ್‌ಗೆ ಹೋಗಿದ್ದಾರೆ. ಕೋರ್ಟ್‌ನಲ್ಲಿನ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿಕೊಂಡು ಬರಲಿ. ಮುಕ್ತ ಚರ್ಚೆಗೆ ನಾವು ಸದಾ ಸಿದ್ಧರಿದ್ದೇವೆ. ಸಮಾಜ ಮತ್ತು ಸಮುದಾಯಕ್ಕೆ ಒಳಿತಾಗಬೇಕು ಎಂಬುದಷ್ಟೇ ನಮ್ಮ ಆಶಯವಾಗಿದೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಮಠದ ಬಗ್ಗೆ ಮೊದಲಿನಿಂದಲೂ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಆದರೆ, ನಿನ್ನೆಯ ಸಭೆಗೆ ಯಾಕೆ ಹೋದರು ಎಂಬುದು ಗೊತ್ತಿಲ್ಲ. ನಮ್ಮ ಬಳಿ ದೂರವಾಣಿಯಲ್ಲಿ ವಿಚಾರ ವಿನಿಮಯ ನಡೆಯುತ್ತಿದ್ದವು. ಆದರೆ ಇದ್ದಕ್ಕಿದ್ದಂತೆ ಈ ರೀತಿ ನಡೆದುಕೊಂಡಿರುವುದು ತಮಗೆ ಬೇಸರ ತರಿಸಿದೆ ಎಂದರು.

ನಾವೇ ಪೀಠದಲ್ಲಿ ಇರಬೇಕೆಂಬ ಆಸೆ ಹೊಂದಿಲ್ಲ. ಕೋರ್ಟ್‌ನಲ್ಲಿನ ಕೇಸ್ ವಾಪಸ್ ಪಡೆದು ಬರಲಿ. ಎಲ್ಲಾ ವಿಚಾರಗಳ ಕುರಿತಂತೆ ಸಮಾಲೋಚನೆ ನಡೆಸಲಿ. ಮುಕ್ತವಾಗಿ ಚರ್ಚಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳುವುದಕ್ಕೆ ನಮ್ಮ ವಿರೋಧ ಇಲ್ಲ. ಎಲ್ಲೋ ಸಭೆ ಮಾಡಿ ಆರೋಪ ಮಾಡುವುದು ನಿಲ್ಲಬೇಕು. ಮಠಕ್ಕೆ ಬಂದು ಚರ್ಚೆ ಮಾಡಲಿ. ಸಮಾಜದ ಭಕ್ತರ ಆಕ್ರೋಶ ನೋಡಿದರೆ ಭಯ ಆಗುತ್ತದೆ. ಶಾಂತಿಯುತವಾಗಿ ವರ್ತಿಸಿ, ಸಿಟ್ಟಿನಲ್ಲಿ ಮೂಗು ಕೊಯ್ದುಕೊಂಡಂತೆ (4ನೇ ಪುಟಕ್ಕೆ)

## ಹಸೀನಾ ಪಲಾಯನ

### ಭುಗಿಲೆದ್ದ ಬಾಂಗ್ಲಾದಲ್ಲಿ ಸೈನ್ಯಕ್ಕೆ ಅಧಿಕಾರದ ಚುಕ್ಕಾಣಿ



ಢಾಕಾ, ಆ. 5 - ಬಾಂಗ್ಲಾದೇಶ ಅರಾಜಕತೆಗೆ ಸಿಲುಕಿರುವ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಶೇಖ್ ಹಸೀನಾ ಅವರು ಸೈನ್ಯದ ವಿಮಾನದಲ್ಲಿ ದೇಶ ಬಿಟ್ಟು ಪಲಾಯನ ಮಾಡಿದ್ದಾರೆ. ಹಸೀನಾ ನಿರ್ಗಮನದ ನಂತರ ಸೈನ್ಯ ಅಧಿಕಾರ ವಹಿಸಿಕೊಂಡಿದೆ. ಸುದೀರ್ಘ ಕಾಲದ ಪ್ರಕ್ಷುಬ್ಧತೆಯ ಇತಿಹಾಸ ಹೊಂದಿರುವ ಬಾಂಗ್ಲಾದೇಶಕ್ಕೆ, ಇದು ಮತ್ತೊಂದು ಸವಾಲು ತಂದಿದೆ.

ಹಸೀನಾ ದೇಶ ಬಿಟ್ಟು ತೆರಳಿದ ಸುದ್ದಿ ಹರಡುತ್ತಿದ್ದಂತೆ ನೂರಾರು ಜನರು ಅವರ ನಿವಾಸಕ್ಕೆ ನುಗ್ಗಿ ಧ್ವಂಸ ನಡೆಸಿದ್ದಾರೆ ಹಾಗೂ ಲೂಟಿ ಮಾಡಿದ್ದಾರೆ.

ಹಸೀನಾ ಪದಚ್ಯುತಿಗಾಗಿ ಕಳೆದ ಎರಡು ದಿನಗಳಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ನೂರಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು. ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿದ ಹಸೀನಾ ದೇಶವನ್ನು ತೊರೆದಿದ್ದಾರೆ.

ಈ ಸುದ್ದಿ ತಿಳಿದ ನೂರಾರು ಜನರು ಹಸೀನಾ ಹಾಗೂ ಅವರ ನಿಕಟವರ್ತಿಗಳ ಮನೆಗಳಿಗೆ ನುಗ್ಗಿ ಲೂಟಿ ಮಾಡಿದ್ದಾರೆ. ಬಾಂಗ್ಲಾದೇಶದ ಸ್ಥಾಪಕ ಹಾಗೂ ಹಸೀನಾ ತಂದೆ ಮುಜೀಬುರ್ ರೆಹಮಾನ್ ಅವರ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿದೆ.

ಈ ನಡುವೆ ಹೇಳಿಕೆ ನೀಡಿರುವ ಸೈನ್ಯದ ಮುಖ್ಯಸ್ಥ ಜನರಲ್ ವಕಾರ್ - ಉಜ್ - ಜಮಾನ್, ಶೇಖ್ ಹಸೀನಾ ರಾಜೀನಾಮೆ ನೀಡಿದ್ದಾರೆ. ಹಂಗಾಮಿ ಸರ್ಕಾರ ಅಧಿಕಾರ ವಹಿಸಿಕೊಳ್ಳಲಿದೆ ಎಂದು ತಿಳಿಸಿದ್ದಾರೆ.

ನಾನು ಎಲ್ಲಾ ಹೊಣೆಗಾರಿಕೆ ವಹಿಸಿಕೊಳ್ಳುತ್ತೇನೆ. ದಯವಿಟ್ಟು ಸಹಕರಿಸಿ ಎಂದವರು ಕೇಳಿದ್ದಾರೆ. ಇದರೊಂದಿಗೆ ಹಸೀನಾ ಅವರ 15 ವರ್ಷಗಳ ಆಡಳಿತಕ್ಕೆ ತೆರೆ ಬಿದ್ದಿದೆ.

ನಾನು ರಾಜಕೀಯ ನಾಯಕರನ್ನು ಭೇಟಿ ಮಾಡಿದ್ದೇನೆ ಹಾಗೂ ಕಾನೂನು ಸುವ್ಯವಸ್ಥೆಯ ಹೊಣೆಯನ್ನು ಸೈನ್ಯ ವಹಿಸಿಕೊಳ್ಳಲಿದೆ ಎಂದು ತಿಳಿಸಿದ್ದೇನೆ ಎಂದು ಸೈನ್ಯದ ಮುಖ್ಯಸ್ಥರು ಹೇಳಿದ್ದಾರೆ. ಆದರೆ, ಜಮಾನ್ ಕರೆದಿದ್ದ ಸಭೆಯಲ್ಲಿ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಯಾವ ನಾಯಕರು ಉಪಸ್ಥಿತರಿರಲಿಲ್ಲ.

ಪ್ರತಿಭಟನೆ ನಡೆಸುತ್ತಿರುವವರ ಮೇಲೆ ಗುಂಡು ಹಾರಿಸಬಾರದು ಎಂದು ಸೈನ್ಯ ಹಾಗೂ ಪೊಲೀಸರಿಗೆ ಸೂಚನೆ ನೀಡಿರುವುದಾಗಿ ಸೈನ್ಯದ ಮುಖ್ಯಸ್ಥ ಜಮಾನ್ ಹೇಳಿದ್ದಾರೆ.

ಬಾಂಗ್ಲಾದೇಶದಲ್ಲಿ ನಡೆದ ಈ ಬೆಳವಣಿಗೆಗಳ ನಡುವೆ ಹಸೀನಾ ಅವರು ನವದೆಹಲಿಯ ಗಾಜಿಯಾಬಾದ್ ಬಳಿ ಇರುವ ವಾಯುನೆಲೆಗೆ ಬಂದಿಳಿದರು. ನಂತರ ಅವರು ಲಂಡನ್‌ಗೆ ತೆರಳಲಿದ್ದಾರೆ.

ಈ ನಡುವೆ ಬಾಂಗ್ಲಾದೇಶದಲ್ಲಿ ನೂರಾರು ಜನರು ಇಂದಿರಾ ಗಾಂಧಿ ಸಾಂಸ್ಕೃತಿಕ ಕೇಂದ್ರಕ್ಕೆ ನುಗ್ಗಿ ಧ್ವಂಸ ನಡೆಸಿದ್ದಾರೆ. ದೇಶದ ವಿವಿಧೆಡೆ ಇರುವ ನಾಲ್ಕು ಹಿಂದೂ ದೇವಾಲಯಗಳಿಗೂ ಹಾನಿ ಮಾಡಲಾಗಿದೆ.

ಹಸೀನಾ ಅವರ ಪತಿ ಡಾ. ವಾಜಿದ್ ಮಿಯಾ ಅವರ ಮನೆಯೂ ಹಿಂಸಾಚಾರಕ್ಕೆ ಸಿಲುಕಿದೆ. ಪ್ರಧಾನ ಮಂತ್ರಿ ಅವರ ಅಧಿಕೃತ ನಿವಾಸ ಗಣಭದನ್‌ಗೆ (2ನೇ ಪುಟಕ್ಕೆ)



## ಮುಡಾ: ಕಾನೂನು ತಜ್ಞರ ಜೊತೆ ರಾಜ್ಯಪಾಲರ ಚರ್ಚೆ



ಬೆಂಗಳೂರು, ಆ. 5 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅವರಿಂದ ತನಿಖೆ ನಡೆಸುವುದೂ ಸೇರಿದಂತೆ, ಹಲವು ವಿಚಾರಗಳ ಕುರಿತು ರಾಜ್ಯಪಾಲರು ಸಮಾಲೋಚನೆ ನಡೆಸಿದ್ದಾರೆ.

ಕಳೆದ ಐದಾರು ದಿನಗಳಿಂದ ದೆಹಲಿ ಪ್ರವಾಸದಲ್ಲಿದ್ದ ರಾಜ್ಯಪಾಲರು ಇಂದು ನಗರಕ್ಕೆ ಹಿಂತಿರುಗುತ್ತಿದ್ದಂತೆ ಹಿರಿಯ ಅಧಿಕಾರಿಗಳು ಮತ್ತು ಕಾನೂನು ತಜ್ಞರ ಜೊತೆ ಚರ್ಚೆ ನಡೆಸಿದ್ದಾರೆ.

ಹಗರಣಕ್ಕೆ ಸಂಬಂಧಿಸಿದಂತೆ ರೈತ ಸಂಘಟನಾ ಒಕ್ಕೂಟ ಹಾಗೂ ಟಿ.ಜೆ.ಅಬ್ರಹಾಂ ನೀಡಿರುವ ದೂರು ಆಧರಿಸಿ ರಾಜ್ಯಪಾಲರು ಈಗಾಗಲೇ ಸರ್ಕಾರದ ಮುಖ್ಯಕಾರ್ಯದರ್ಶಿ ಮೂಲಕ ಮುಖ್ಯಮಂತ್ರಿ ಅವರಿಗೆ ನೋಟಿಸ್ ನೀಡಿದ್ದರು. ರಾಜ್ಯಪಾಲರ ನೋಟಿಸ್‌ಗೆ ಸಂಬಂಧಿಸಿದಂತೆ ಸರ್ಕಾರ ಮೂರು ಪ್ರತ್ಯೇಕ ಪತ್ರಗಳನ್ನು ಬರೆದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವತಃ ಮುಖ್ಯಮಂತ್ರಿ ಅವರೇ ರಾಜ್ಯಪಾಲರಿಗೆ ವಿವರಣೆ ನೀಡಿದ್ದರೆ, ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ (2ನೇ ಪುಟಕ್ಕೆ)

## ಷೇರುಪೇಟೆಯಲ್ಲಿ ಶೇ.3ರ ಕುಸಿತ



ಮುಂಬೈ, ಆ. 5 - ಸೆನ್ಸೆಕ್ಸ್ ಹಾಗೂ ನಿಫ್ಟಿ ಸೂಚ್ಯಂಕಗಳು ಸೋಮವಾರ ಶೇ.3ರ ಕುಸಿತ ಕಂಡಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಆಗಿರುವ ಕುಸಿತ ಹಾಗೂ ಅಮೆರಿಕ ಹಿಂಜರಿತಕ್ಕೆ ಗುರಿಯಾಗಲಿದೆ ಎಂಬ ಭೀತಿಯೇ ಈ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

ಬಿ.ಎಸ್.ಇ. ಸೆನ್ಸೆಕ್ಸ್ 2,222.25 ಅಂಕಗಳ ಕುಸಿತ ಕಂಡು, 78,759.40ರ ಹಂತಕ್ಕೆ ಕುಸಿದಿದೆ. ಇದು ಶೇ.2.74ರ ಕುಸಿತವಾಗಿದೆ.

ಎನ್.ಎಸ್.ಇ. ನಿಫ್ಟಿ ಸೂಚ್ಯಂಕ 662.10 ಅಂಕಗಳ ಕುಸಿತ ಕಂಡು 24,055.60ರ ಹಂತಕ್ಕೆ ತಲುಪಿದೆ. ಇದು ಶೇ.3.33ರ ಕುಸಿತವಾಗಿದೆ.

ಜಪಾನ್‌ನ ನಿಕ್ಕಿ ಸೂಚ್ಯಂಕದಲ್ಲಿ ಶೇಕಡ 12ರ ಕುಸಿತವಾಗಿದೆ. ಏಷಿಯಾದ ಸಿಯೋಲ್, ಟೋಕಿಯೋ, ಶಾಂಘೈ (4ನೇ ಪುಟಕ್ಕೆ)

## ಡಾಲರ್ ಎದುರು ರೂಪಾಯಿ 31 ಪೈಸೆ ಕುಸಿತ

ಮುಂಬೈ, ಆ. 5 - ಡಾಲರ್ ಎದುರು ರೂಪಾಯಿ ಮೌಲ್ಯ 31 ಪೈಸೆ ಇಳಿಕೆಯಾಗಿದ್ದು ಸಾರ್ವಕಾಲಿಕ ದಾಖಲೆಯಾದ 84.03 ರೂಪಾಯಿಗಳ ಹಂತಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಆಗಿರುವ ಬೆಳವಣಿಗೆಗಳು, ಮಧ್ಯ ಪ್ರಾಚ್ಯದಲ್ಲಿ ಉಂಟಾಗಿರುವ ಉದ್ವಿಗ್ನತೆ ಮತ್ತು ಅಮೆರಿಕ ಆರ್ಥಿಕ ಹಿಂಜರಿತಕ್ಕೆ ಗುರಿಯಾಗುವ ಕಳವಳಗಳು ಈ ಕುಸಿತಕ್ಕೆ ಕಾರಣ.

## ಸಿದ್ಧರಾಮಯ್ಯ ಸರ್ಕಾರ ಅಸ್ಥಿರ ಯತ್ನ ಸಹಿಸುವುದಿಲ್ಲ



**ರಾಜ್ಯಪಾಲರು ಸಿಎಂಗೆ ನೀಡಿರುವ ಶೋಕಾಸ್ ನೋಟಿಸ್ ಹಿಂಪಡೆಯುವಂತೆ ಆಗ್ರಹಿಸಿ ಜಿಲ್ಲಾ ಶೋಷಿತ ಸಮುದಾಯಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ**

ದಾವಣಗೆರೆ, ಆ.5- ರಾಜ್ಯಪಾಲರು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ನೀಡಿರುವ ಶೋಕಾಸ್ ನೋಟಿಸನ್ನು ತಕ್ಷಣವೇ ಹಿಂಪಡೆಯಲು ಆಗ್ರಹಿಸಿ ಜಿಲ್ಲಾ ಶೋಷಿತ ಸಮುದಾಯಗಳ ಒಕ್ಕೂಟದಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಂಗೊಳ್ಳಿ ರಾಯಣ್ಣ ವೃತ್ತದವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದ ಅಹಿಂದ ಮತ್ತು ಶೋಷಿತ ಸಮುದಾಯಗಳ ಮುಖಂಡರು ಹಾಗೂ ಕಾರ್ಯಕರ್ತರು, ರಾಯಣ್ಣ ವೃತ್ತದಲ್ಲಿ ಬಹಿರಂಗ ಸಭೆ ನಡೆಸಿದರು. ಈ ವೇಳೆ ಪ್ರತಿಭಟನಾ ಸ್ಥಳಕ್ಕೆ ಬಂದ ಅಪರ ಜಿಲ್ಲಾಧಿಕಾರಿ ಲೋಕೇಶ್ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಸಿದ್ಧರಾಮಯ್ಯ ನೇತೃತ್ವದ ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಿಲ್ಲ. ಕಾಂಗ್ರೆಸ್‌ನ ಎಲ್ಲಾ 136 ಶಾಸಕರು ಸಿದ್ದರಾಮಯ್ಯ ಅವರ ಬೆನ್ನಿಗೆ ನಿಂತಿದ್ದೇವೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಬಹಿರಂಗ ಸಭೆಯಲ್ಲಿ ಹೇಳಿದರು.

ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ಮಾತನಾಡಿ, ಕೇಂದ್ರ ಸರ್ಕಾರದ ಒತ್ತಡಕ್ಕೆ ಮಣಿದು ರಾಜ್ಯಪಾಲರು ಸಿಎಂಗೆ ನೋಟಿಸ್‌ನೀಡಿದ್ದು,ತಕ್ಷಣವೇ (2ನೇ ಪುಟಕ್ಕೆ)

## ಅರಮನೆಗೆ ನುಗ್ಗಿದ ಪ್ರತಿಭಟನಾಕಾರರು

### ಪ್ರಧಾನಿ ಹಾಸಿಗೆಯಲ್ಲಿ ವಿರಾಮ, ಸೀರೆಗಳಿಂದ ಹಿಡಿದು ಟಿವಿಗಳವರೆಗೆ ಲೂಟಿ, ಕೊಳದಲ್ಲಿ ಮೀನಿಗೆ ಗಾಳ





ಢಾಕಾ, ಆ. 5 - ಬಾಂಗ್ಲಾದೇಶದ ಪ್ರಧಾನ ಮಂತ್ರಿ ಶೇಖ್ ಹಸೀನಾ ಅವರು ರಾಜೀನಾಮೆ ನೀಡಿ ದೇಶದಿಂದ ಪಲಾಯನ ಮಾಡಿದ ನಂತರ, ಅವರ ಅರಮನೆಗೆ ನುಗ್ಗಿರುವ ಪ್ರತಿಭಟನಾಕಾರರು ಚಹಾ ಕಪ್ಪುಗಳಿಂದ ಹಿಡಿದು ಟಿವಿಗಳವರೆಗೆ ಹಲವಾರು ವಸ್ತುಗಳನ್ನು ಲೂಟಿ ಮಾಡಿದ್ದಾರೆ.

ದೊಡ್ಡ ಸಂಖ್ಯೆಯಲ್ಲಿ ಅರಮನೆಗೆ ನುಗ್ಗಿದ ಪ್ರತಿಭಟನಾಕಾರರು ಸಂಭ್ರಮಾಚರಣೆ ನಡೆಸಿದರು. ಹಲವರು ಪುಸ್ತಕ ಸೀರೆಗಳು ಇತ್ಯಾದಿಗಳನ್ನು ಲೂಟಿ ಮಾಡಿದರು. ಇನ್ನು ಕೆಲವರು ಆರಾಮಾಗಿ ಹಾಸಿಗೆ ಮೇಲೆ ಮಲಗಿದ್ದರು.


ಕೆಲವರು ಭೋಜನ ಸವಿದರೆ ಇನ್ನು ಕೆಲವರು ಅರಮನೆ ಆವರಣದ ಕೊಳದಲ್ಲಿ ಮೀನು ಹಿಡಿಯುತ್ತಿದ್ದರು. ಇನ್ನೊಬ್ಬ ವ್ಯಕ್ತಿ ಮಾಜಿ ಪ್ರಧಾನಿಗೆ ಸೇರಿದ್ದು ಎನ್ನಲಾದ ಸೀರೆಯನ್ನು ತಾನೇ ಧರಿಸಿದ್ದ. ಎಲ್ಲ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದ ನೇತಾರ ಹಾಗೂ ಹಸೀನಾ ಅವರ ತಂದೆ ಶೇಖ್ ಮುಜೀಬುರ್ ರೆಹಮಾನ್ ಅವರ ಪ್ರತಿಮೆಯನ್ನು ಪ್ರತಿಭಟನಾಕಾರರು ಧ್ವಂಸಗೊಳಿಸಿದ್ದಾರೆ.

ಹಸೀನಾ ಅವರ ನಿಕಟವರ್ತಿಗಳ ಮನೆಗಳ ಮೇಲೂ ದಾಳಿ ನಡೆಸಲಾಗಿದೆ. ಕೆಲವರು ಬಾಂಗ್ಲಾ ಶಾಸನ ಸಭೆಗೆ ನುಗ್ಗಿ ಜನಪ್ರತಿನಿಧಿಗಳ ಕುರ್ಚಿಯ ಮೇಲೆ ಕುಳಿತ ವಿಡಿಯೋಗಳೂ ಕಂಡು ಬಂದಿವೆ.

## 'ಕಾಯಕ ನಿಷ್ಠೆ' ಸಿದ್ಧರಾಮ ಸಂಸ್ಕೃತಿಯ ಆಧಾರ

### ಸಿದ್ಧರಾಮೇಶ್ವರ ದೇವರ ರಥೋತ್ಸವದಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ




ದಾವಣಗೆರೆ, ಆ. 5- ಕಾಯಕ ನಿಷ್ಠೆಯೇ ಸಿದ್ಧರಾಮ ಸಂಸ್ಕೃತಿಯ ಮೂಲಾಧಾರ. ತನ್ನ ಅಮೋಘ ವ್ಯಕ್ತಿತ್ವ ದಿಂದಾಗಿ ಬದುಕಿದ್ದಾಗಲೇ ದಂತ ಕಥೆಯಾದವರು. ಹೊಸ ಸಂಸ್ಕೃತಿಯೊಂದಕ್ಕೆ ದಾರಿಯಾದವರು ಸಿದ್ಧರಾಮರು ಎಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನುಡಿದರು.

ನಗರದ ವೆಂಕಾಭೋವಿ ಕಾಲೋನಿಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ, ಭೋವಿ ಗುರುಪೀಠ ದಾವಣಗೆರೆ ಶಾಖೆ ವತಿಯಿಂದ ಹಮ್ಮಿಕೊಂಡಿದ್ದ ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ದೇವರ 62 ನೇ ರಥೋತ್ಸವ, ಲಿಂ. ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿಯವರ 22 ನೇ ಸಂಸ್ಮರಣೋತ್ಸವದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಜನಾನುರಾಗಿ ಕಾರ್ಯಗಳ ಮೂಲಕ ಅಂದಿನ ಕನ್ನಡ ನಾಡಿನ ಜನ ಮಾನಸದಲ್ಲಿ ಜೀವಂತವಾಗಿದ್ದ ಸಿದ್ಧರಾಮರು ಸಮ ಕಾಲೀನ ಜನರಿಗೆ ಗುರುವಾಗಿ, ಉತ್ತರ ಕಾಲೀನ ಜನರಿಗೆ ದೇವರಾಗಿ ದರ್ಶನ ನೀಡುತ್ತಾರೆ ಎಂದರು.

ಸಿದ್ಧರಾಮರ ವ್ಯಕ್ತಿತ್ವ ಅಸಾಧಾರಣ ವಾದುದು. ಒಂದು ಪರಂಪರೆಯನ್ನು ಕಟ್ಟುವಲ್ಲಿನ ಬದ್ಧತೆ, ಪ್ರಸಿದ್ಧಿ ಹಾಗೂ ಅವರ ದೈವತ್ವದ ಗುಣ ಒಂದು ಸಂಸ್ಕೃತಿಯನ್ನು ಹುಟ್ಟು ಹಾಕಿತು. ಸಿದ್ಧರಾಮ ಅವರದು ಶ್ರಮಿಕ ಪರಂಪರೆ. ಕನ್ನಡವೇ ಸಿದ್ಧರಾಮರ ಉಸಿರು. ಈ ಮಣ್ಣಿನ ಭಾಷೆ, ಬಯಲ ಧರ್ಮ ಅವರ (4ನೇ ಪುಟಕ್ಕೆ)

## ಹರಿಹರದ ಬಿ. ನಿಂಗಪ್ಪ ನಿಧನ



ಹರಿಹರ ನಗರದ ಹೈಸ್ಕೂಲ್ ಬಡಾವಣೆ ನಿವಾಸಿ
ಮಾಜಿ ಸಚಿವರಾದ ದಿವಂಗತ ಬಿ. ಬಸವಲಿಂಗಪ್ಪನವರ ಸಹೋದರರು
ಮಾಜಿ ಪುರಸಭಾ ಅಧ್ಯಕ್ಷರು,
ಹರಿಹರೇಶ್ವರ ಅರ್ಬನ್ ಬ್ಯಾಂಕಿನ ಮಾಜಿ ಅಧ್ಯಕ್ಷರು ಹಾಗೂ
ಚಲವಾದಿ ಸಮಾಜದ ಗೌರವ ಅಧ್ಯಕ್ಷರಾದ

**ಬಿ. ನಿಂಗಪ್ಪನವರು**

ದಿನಾಂಕ 5.8.2024ರ ಸೋಮವಾರ ರಾತ್ರಿ 8.45ಕ್ಕೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 96 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಇಬ್ಬರು
ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು
ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.8.2024ರ
ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಹರಿಹರ ಕೈಲಾಸ ನಗರದ ಹಿಂದೂ
ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**

# ಹಸೀನಾ ಪದಚ್ಯುತಿಗೊಳಿಸಿದ ವಿದ್ಯಾರ್ಥಿ ಹೋರಾಟ

ಢಾಕಾ, ಆ. 6 - ಬಾಂಗ್ಲಾದೇಶದಲ್ಲಿ ಸರ್ಕಾರಿ ಹುದ್ದೆಗಳಲ್ಲಿನ ಮೀಸಲಾತಿ ವ್ಯವಸ್ಥೆಯ ವಿರುದ್ಧ ವಿದ್ಯಾರ್ಥಿಗಳು ಆರಂಭಿಸಿದ ಶಾಂತಿಯುತ ಹೋರಾಟ ಹಿಂಸಾ ಸ್ವರೂಪಕ್ಕೆ ತಿರುಗಿ ಪ್ರಧಾನಮಂತ್ರಿ ಶೇಖ್ ಹಸೀನಾ ಅವರ ಪದಚ್ಯುತಿಗೆ ಕಾರಣವಾಗಿದೆ.



ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ನೂರಾರು ಜನ ಸಾವನ್ನಪ್ಪಿದ್ದರು. ಇದು ಶೇಖ್ ಹಸೀನಾ ಸರ್ಕಾರ ಹಾಗೂ ಅವರ ಅವಾಮಿ ಲೀಗ್ ಪಕ್ಷದ ವಿರುದ್ಧ ಆಕ್ರೋಶಕ್ಕೆ ಕಾರಣವಾಗಿತ್ತು. ಸರ್ಕಾರ ವಿರೋಧಿ ಪ್ರತಿಭಟನಾಕಾರರು ದೇಶಾದ್ಯಂತದಿಂದ ರಾಜಧಾನಿ ಡಾಕಾ ಕಡೆ ತೆರಳಿದ್ದರು. ದೇಶದ ಹಲವೆಡೆ ನಿರ್ದಿಷ್ಟ ಅವಧಿಯ ಕರ್ಫ್ಯೂ ವಿಧಿಸಲಾಗಿತ್ತು ಹಾಗೂ ಇಂಟರ್ನೆಟ್ ಸಂಪರ್ಕದ ಮೇಲೆ ಕಡಿವಾಣ ಹಾಕಲಾಗಿತ್ತು.

ಆದರೆ, ಪ್ರತಿಭಟನಾಕಾರರನ್ನು ತಡೆಯುವ ಪ್ರಯತ್ನದಲ್ಲಿ ಹಸೀನಾ ಸರ್ಕಾರ ವಿಫಲವಾಗಿದೆ. ಅವರು ರಾಜೀನಾಮೆ ನೀಡಿ ಪಲಾಯನ ಮಾಡಿದ್ದರೆ, ಸೈನ್ಯ ಅಧಿಕಾರ ವಹಿಸಿಕೊಂಡಿದೆ.

**ಮೀಸಲಾತಿ ಹೋರಾಟ :** ಕಳೆದ ಜುಲೈ ತಿಂಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಮೀಸಲಾತಿ ವ್ಯವಸ್ಥೆಯ ವಿರುದ್ಧ ಹೋರಾಟ ಆರಂಭಿಸಿದ್ದರು. ಜುಲೈ 16ರಂದು ವಿದ್ಯಾರ್ಥಿಗಳು ಹಾಗೂ ಭದ್ರತಾ ಸಿಬ್ಬಂದಿ ನಡುವೆ ಘರ್ಷಣೆ ನಡೆದಿತ್ತು. ವಿದ್ಯಾರ್ಥಿಗಳನ್ನು ಎದುರಿಸಲು ಭದ್ರತಾ ಸಿಬ್ಬಂದಿ ಅಶ್ರುವಾಯು ಹಾಗೂ ರಬ್ಬರ್ ಗುಂಡು ಸಿಡಿಸಿದ್ದರು. ನಂತರ ಕರ್ಫ್ಯೂ ವಿಧಿಸಿ ಕಂಡಲ್ಲಿ ಗುಂಡು ಹಾರಿಸಲು ಆದೇಶ ಹೊರಡಿಸಲಾಗಿತ್ತು. ಈ ಹಿಂಸಾಚಾರದಲ್ಲಿ 150ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಸರ್ಕಾರ ತಿಳಿಸಿತ್ತು. ಮೃತರ ಸಂಖ್ಯೆ 220ಕ್ಕೂ ಹೆಚ್ಚಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿದ್ದವು.

ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿದ ಸುಪ್ರೀಂ ಕೋರ್ಟ್ ಮೀಸಲಾತಿ ವ್ಯವಸ್ಥೆಯಲ್ಲಿ ಬದಲಾವಣೆ ತಂದಿತ್ತು. ಆದರೆ ಪ್ರತಿಭಟನೆಗಳು ಹೆಚ್ಚಾಗುತ್ತಾ ಸಾಗಿ, ಶೇಕ್ ಹಸೀನಾ ರಾಜೀನಾಮೆ ನೀಡಬೇಕು ಎಂಬ ಆಗ್ರಹ ಕೇಳಿ ಬಂದಿತ್ತು.

ಕಳೆದ ವಾರಾಂತ್ಯದಲ್ಲಿ ಹಿಂಸಾಚಾರ ಭುಗಿಲೆದ್ದು ಭಾನುವಾರದಂದು ಕನಿಷ್ಠ 95 ಜನ ಸಾವನ್ನಪ್ಪಿದ್ದರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿದ್ದವು.

**ರಾಜೀನಾಮೆಗೆ ಪಟ್ಟು :** ಪ್ರತಿಭಟನಾಕಾರರು ಮೊದಲು ಮೀಸಲಾತಿ ವ್ಯವಸ್ಥೆ ವಿರುದ್ಧ ದನಿ ಎತ್ತಿದ್ದರು. 1971ರ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರ ಕುಟುಂಬಗಳಿಗೆ ಶೇಕಡ 30ರಷ್ಟು ಮೀಸಲಾತಿ ನೀಡುವುದು ಪಕ್ಷಪಾತಿ ಎಂದು ಆಕ್ಷೇಪಿಸಿದ್ದರು. ನಂತರ ಸುಪ್ರೀಂ ಕೋರ್ಟ್ ಈ ಮೀಸಲಾತಿಯನ್ನು ಇಳಿಸಿತ್ತು. ಹಸೀನಾ ಸರ್ಕಾರ ಈ ನಿರ್ಧಾರವನ್ನು ಒಪ್ಪಿಕೊಂಡಿತ್ತು.

ಆದರೆ, ಪ್ರತಿಭಟನೆ ಮುಂದುವರೆಸಿದ ವಿದ್ಯಾರ್ಥಿ ಗುಂಪುಗಳು, ಹಸೀನಾ ಹಾಗೂ ಅವರ ಸಂಪುಟ ರಾಜೀನಾಮೆ ನೀಡಬೇಕು ಎಂದು ಪಟ್ಟು ಹಿಡಿದಿದ್ದವು.

**ಅಪರಾಧಿಗಳು ಎಂದಿದ್ದ ಹಸೀನಾ :** ತಮ್ಮ ವಿರುದ್ಧದ ಪ್ರತಿಭಟನೆಗಳು ವಿಧ್ವಂಸಕ ಕೃತ್ಯ ಎಂದು ಹೇಳಿದ ಹಸೀನಾ, ಎರಡನೇ ಬಾರಿ ಅಂತರ್ಜಾಲ ಕಡಿವಾಣಕ್ಕೆ ಆದೇಶ ಹೊರಡಿಸಿದ್ದರು. ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿರುವವರು ವಿದ್ಯಾರ್ಥಿಗಳಲ್ಲ ಅವರು ಅಪರಾಧಿಗಳು ಎಂದು ಹಸೀನಾ ಹೇಳಿದ್ದರು.

ಹಸೀನಾ ರಾಜೀನಾಮೆ ನೀಡಬೇಕು ಎಂದು ಕೇಳುತ್ತಿರುವುದನ್ನು ನೋಡಿದಾಗ ಈ ಪ್ರತಿಭಟನೆಯ ಹಿಂದೆ ಪ್ರತಿಪಕ್ಷಗಳು ಇರುವುದು ಕಂಡುಬರುತ್ತದೆ ಎಂದು ಹಸೀನ ಅವರ ಪಕ್ಷ ಅವಾಮಿ ಲೀಗ್ ಹೇಳಿತ್ತು. ಪ್ರತಿಪಕ್ಷವಾದ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ ಹಾಗೂ ನಿಷೇಧಿತ ಜಮಾತ್ ಎ ಇಸ್ಲಾಮಿ ಪಕ್ಷಗಳು ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುತ್ತಿವೆ ಎಂದು ಆರೋಪಿಸಲಾಗಿತ್ತು.

**ಪ್ರಶ್ನಾರ್ಹ ಚುನಾವಣೆ :** ಆದರೆ ತೀವ್ರ ಪ್ರತಿಭಟನೆಗಳು ಮುಂದುವರೆದು ಶೇಕ್ ಹಸೀನಾ ಅವರ 15 ವರ್ಷಗಳ ಸುದೀರ್ಘ ಆಡಳಿತಕ್ಕೆ ದೊಡ್ಡ ಸವಾಲು ಎದುರಾಗಿತ್ತು. ಕಳೆದ ಜನವರಿಯಲ್ಲಿ ಕಳೆದ ಚುನಾವಣೆಯಲ್ಲಿ ಹಸೀನಾ ಅವರು ಪುನರಾಯ್ಕೆ ಆಗಿದ್ದರು. ಆದರೆ ಈ ಚುನಾವಣೆಗೆ ಪ್ರತಿಪಕ್ಷಗಳು ಬಹಿಷ್ಕಾರ ಹಾಕಿದ್ದವು. ಚುನಾವಣೆಯ ಬಗ್ಗೆ ಹಲವಾರು ಪ್ರಶ್ನೆಗಳು ಉದ್ಭವಿಸಿದ್ದವು.

ನಂತರ ಭುಗಿಲೆದ್ದ ಪ್ರತಿಭಟನೆಗಳು ಪ್ರತಿಪಕ್ಷಗಳ ಧ್ವನಿಯನ್ನು ಬಲಪಡಿಸಿದ್ದವು. ಯಾವುದೇ ಬೆಲೆ ತೆತ್ತಾದರೂ ಅಧಿಕಾರ ಹಿಡಿದುಕೊಳ್ಳಬೇಕು ಎಂಬ ಹಸೀನಾ ನಿರ್ಧಾರ ಈ ಸಮಸ್ಯೆಗಳಿಗೆ ಕಾರಣ ಎಂದು ಹೇಳಲಾಗಿತ್ತು.

ಈ ನಡುವೆ ಬಾಂಗ್ಲಾದೇಶ ಆರ್ಥಿಕ ಸಮಸ್ಯೆ ಸಹ ಎದುರಿಸುತ್ತಿತ್ತು. ರಫ್ತು ಕುಸಿತವಾಗಿತ್ತು ಹಾಗೂ ವಿದೇಶಿ ವಿನಿಮಯ ಕಡಿಮೆಯಾಗಿತ್ತು. ಯುವ ಪದವೀಧರರಿಗೆ ಉದ್ಯೋಗ ಅವಕಾಶವೂ ಕಡಿಮೆಯಾಗಿತ್ತು.

ಸೈನಿಕ ದಂಗೆಯ ಇತಿಹಾಸವೇ ಇರುವ ಬಾಂಗ್ಲಾದೇಶದಲ್ಲಿ ಹಸೀನಾ ಅಧಿಕಾರದಲ್ಲಿ ಮುಂದುವರೆಯುವುದು ಸವಾಲಿನದ್ದಾಗಿತ್ತು. ಹಸೀನಾ ವಿರುದ್ಧದ ಪ್ರತಿಭಟನೆಗಳು ಅಂತಿಮವಾಗಿ ಅವರ ಅಧಿಕೃತ ನಿವಾಸದ ಬಾಗಿಲಿಗೆ ಬಂದು ಹಸೀನಾ ರಾಜೀನಾಮೆ ನೀಡಿ ದೇಶ ಬಿಟ್ಟು ಪಲಾಯನ ಮಾಡುವಂತಾಗಿದೆ.

# ಸರ್ಕಾರ ಅಸ್ಥಿರ ಯತ್ನ ಸಹಿಸುವುದಿಲ್ಲ



**(1ನೇ ಪುಟದಿಂದ)** ಅದನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು. ಎಲ್ಲರಿಗೂ ಸಮಾನತೆ ಕೊಡುವ ನಾಯಕತ್ವ ಹೊಂದಿರುವ ಸಿದ್ದರಾಮಯ್ಯ ನಮ್ಮ ನಾಡಿನಲ್ಲಿ ಹುಟ್ಟಿರುವುದು ನಮ್ಮ ಪುಣ್ಯ. ಸಿದ್ದರಾಮಯ್ಯನವರ ತೇಜೋವಧೆ ಮಾಡಲು ಏನೂ ಸಿಗದಿರುವುದಕ್ಕೆ ಬಿಜೆಪಿವರು ಮುಡಾ ಪ್ರಕರಣ ಸೃಷ್ಟಿಸಿದ್ದಾರೆ ಎಂದು ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ ಆರೋಪಿಸಿದರು.

ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವ ನಾಯ್ಕ ಮಾತನಾಡಿ, ಚೆಕ್‌ನಲ್ಲಿ ಲಂಚ ಪಡೆದು, ಅಪ್ಪನನ್ನು ಜೈಲಿಗೆ ಅಟ್ಟಿದ ಬಿ.ವೈ. ವಿಜಯೇಂದ್ರ ಹಾಗೂ ಒಮ್ಮೆ ಬಿಜೆಪಿ ಪಾದಯಾತ್ರೆಗೆ ಹೋಗಲ್ಲ ಎಂದು ಹೇಳಿ, ಮಾರನೆಯ ದಿನ ಹೋಗುತ್ತೇನೆಂದು ಹೇಳುವ ಅಪ್ರಬುದ್ಧ ಎಚ್.ಡಿ. ಕುಮಾರಸ್ವಾಮಿಗೆ ಸಿದ್ಧರಾಮಯ್ಯ ಅವರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಅವರನ್ನ ಮುಖ್ಯಮಂತ್ರಿ ಪಟ್ಟದಿಂದ ಇಳಿಸುವ ಹುನ್ನಾರವಿದು. ಕಳೆದ 40 ವರ್ಷದ ಸಾರ್ವಜನಿಕ ಜೀವನದಲ್ಲಿ ಒಂದೇ ಒಂದು ಭ್ರಷ್ಟಾಚಾರ ನಡೆಸದ ಸಿದ್ದರಾಮಯ್ಯ ಅವರಿಗೆ ಕಪ್ಪು ಮಸಿ ಬಳಿದು, ಕುರ್ಚಿಯಿಂದ ಕೆಳಕ್ಕೆ ಇಳಿಸುವ ಯಾವುದೇ ಪ್ರಯತ್ನ ನಡೆಯುವುದೇ ಇಲ್ಲ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಮುಖಂಡರುಗಳಾದ ವೀರಣ್ಣ, ಹೊದಿಗೆರೆ ರಮೇಶ್, ಕೆ. ಚಮನ್‌ಸಾಬ್, ಆಶಾ ಉಮೇಶ್, ಸೀಮೆಎಣ್ಣೆ ಮಲ್ಲೇಶ್, ಎ. ನಾಗರಾಜ್, ಎಂ. ನಾಗೇಂದ್ರಪ್ಪ, ಎಸ್. ಮಲ್ಲಿಕಾರ್ಜುನ್, ಎನ್. ರುದ್ರಮುನಿ, ಮುದೇಗೌಡ್ರ ಗಿರೀಶ್, ಎಸ್.ಎಸ್. ಗಿರೀಶ್, ನಂಜಾ ನಾಯ್ಕ, ಬಿ.ಜಿ. ವಿನಯಕುಮಾರ್, ಲೋಕಿಕೆರೆ ಸಿದ್ದಪ್ಪ, ಹಾಲೇಕಲ್ಲು ಅರವಿಂದ್, ಬಿ.ನಿಂಗರಾಜ್, ದೀಟೂರು ಚಂದ್ರು, ಎಸ್. ಎಲ್. ಆನಂದಪ್ಪ, ಕೆ.ಪಿ. ಪಾಲಯ್ಯ, ನಲ್ಕುಂದ ಹಾಲೇಶ್, ಇಟ್ಟಿಗುಡಿ ಮಂಜುನಾಥ್ ಇತರರು ಪಾಲ್ಗೊಂಡಿದ್ದರು.

# ಪ್ರಧಾನಿ ಹಸೀನಾ ಪಲಾಯನ

**(1ನೇ ಪುಟದಿಂದ)** ನುಗ್ಗಿದ ಜನರು, ಅಲ್ಲಿನ ಸೋಫಾ ಹಾಗೂ ಕುರ್ಚಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಚಹಾ ಲೋಟ ಹಾಗೂ ಲಿಪ್‌ಸ್ಟಿಕ್‌ಗಳನ್ನೂ ಬಿಡದೆ ತೆಗೆದುಕೊಂಡು ಹೋಗಿದ್ದಾರೆ.

ರಾಜಧಾನಿಯಲ್ಲಿರುವ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಕಚೇರಿಗೆ ಬೆಂಕಿ ಹಚ್ಚಲಾಗಿದೆ. ಗೃಹ ಸಚಿವ ಅಸಾದುಜಮನ್ ಖಾನ್ ಅವರ ಮನೆ ಲೂಟಿ ಮಾಡಲಾಗಿದೆ. ಹಲವರು ಮುಖ್ಯ ನ್ಯಾಯಮೂರ್ತಿಗಳ ನಿವಾಸಕ್ಕೂ ನುಗ್ಗಿದ್ದಾರೆ. ಹಿಂಸಾಚಾರ ಕೇವಲ ರಾಜಧಾನಿ ಢಾಕಾಗೆ ಸೀಮಿತವಾಗಿಲ್ಲ. ಸಿಲ್ಹೆಟ್ ನಗರದಲ್ಲೂ ಹಿಂಸಾಚಾರ ನಡೆದಿದೆ. ಉಪ ಆಯುಕ್ತ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗಳಿಗೆ ಬೆಂಕಿ ಹಚ್ಚಲಾಗಿದೆ. ಹಲವು ಜನಪ್ರತಿನಿಧಿಗಳ ಮನೆಗಳನ್ನು ಲೂಟಿ ಮಾಡಲಾಗಿದೆ.

2009 ರಿಂದ ಹಸೀನಾ ಅವರು ನಿರಂತರವಾಗಿ ಅಧಿಕಾರದಲ್ಲಿದ್ದರು. ಸತತ ನಾಲ್ಕನೇ ಬಾರಿ ಆಯ್ಕೆಯಾಗಿದ್ದರು. ಆದರೆ ಕಳೆದ ಜನವರಿಯಲ್ಲಿ ನಡೆದ ಚುನಾವಣೆಗೆ ಪ್ರತಿಪಕ್ಷಗಳು ಬಹಿಷ್ಕಾರ ಹಾಕಿದ್ದವು. ಇದರಿಂದಾಗಿ ಚುನಾವಣೆ ವಿವಾದಕ್ಕೆ ಸಿಲುಕಿತ್ತು. ಮೀಸಲಾತಿ ವ್ಯವಸ್ಥೆಗೆ ಸಂಬಂಧಿಸಿದಂತೆ ಕಳೆದ ಜೂನ್ ತಿಂಗಳಲ್ಲಿ ಪ್ರತಿಭಟನೆ ಆರಂಭವಾಗಿತ್ತು. ನಂತರ ಪ್ರತಿಭಟನೆ ಹಿಂಸಾ ಸ್ವರೂಪ ತಳೆದಿತ್ತು. ಹಿಂಸೆಯಲ್ಲಿ 200ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು. ನಂತರ ಪ್ರತಿಭಟನೆ ಶೇಖ್ ಹಸೀನಾ ಅವರ ಪದಚ್ಯುತಿಯ ಕಡೆ ತಿರುಗಿತ್ತು. ಅವರು ರಾಜೀನಾಮೆ ನೀಡಬೇಕೆಂದು ಹೋರಾಟ ಆರಂಭವಾಗಿತ್ತು. ಈ ಹೋರಾಟದಲ್ಲಿ ನೂರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದರು.

# ಸೇಂಟ್ ಜಾನ್ಸ್ ವಿದ್ಯಾ ಸಂಸ್ಥೆಯಲ್ಲಿ 'ಮಿಷನ್ ವಾತ್ಸಲ್ಯ' ಕಾರ್ಯಕ್ರಮ



ದಾವಣಗೆರೆ, ಆ. 5- ನಗರದ ಸೇಂಟ್‌ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ 'ಮಿಷನ್ ವಾತ್ಸಲ್ಯ' ಎಂಬ ಕಾರ್ಯಕ್ರಮದಡಿ ವಿದ್ಯಾರ್ಥಿನಿಯರಿಗಾಗಿ ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ಮಕ್ಕಳ ಸಂರಕ್ಷಣಾಧಿಕಾರಿ ಶ್ರೀಮತಿ ಟಿ.ಎನ್. ಕವಿತಾ ಮಾತನಾಡಿ, ಮಕ್ಕಳ ಸಹಾಯವಾಣಿಯ ಉಪಯೋಗ, ಮಕ್ಕಳು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬದಲಾಗುವಾಗ ದೈಹಿಕ ಮತ್ತು ಮಾನಸಿಕ ಬದಲಾವಣೆಗಳು ಮುಂತಾದವುಗಳ ಬಗ್ಗೆ ಸಲಹೆ ನೀಡಿದರು. ಜಿಲ್ಲಾ ಮಕ್ಕಳ ಸಹಾಯವಾಣಿ ಸಂಯೋಜನಾಧಿಕಾರಿ ಟಿ. ನಾಗರಾಜ್ ಮಾತನಾಡಿ, ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆಗಳ ಬಗ್ಗೆ ವಿವರವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಾಂಸ್ಥಿಕೇತರ ವಿಭಾಗದ ಎನ್. ಚಂದ್ರಶೇಖರ್, ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್, ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ, ಖಜಾಂಚಿ ಪ್ರವೀಣ್ ಹಲ್ಲುಮನೆ, ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ಸೈಯ್ಯದ್ ಆರಿಫ್ ಆರ್. ಮತ್ತು ಶ್ರೀಮತಿ ಪ್ರೀತಾ.ಟಿ.ರೈ ಹಾಗೂ ಉಪಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ ಎಸ್.ಎಂ ಹಾಗೂ ಇತರರು ಉಪಸ್ಥಿತರಿದ್ದರು.

# ವ್ಯಸನ ಮುಕ್ತ ಸಮಾಜಕ್ಕಾಗಿ ಮಹಾಂತ ಶ್ರೀಗಳ ಪಣ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಬಿ.ವಿ. ಗಿರೀಶ್‌ಬಾಬು ಶ್ಲಾಘನೆ



ಹರಪನಹಳ್ಳಿ, ಆ.5- ವ್ಯಸನ ಮುಕ್ತ ಸಮಾಜ ನಿರ್ಮಿಸಲು ಮಹಾಂತ ಶಿವಯೋಗಿಗಳು ಪಣ ತೊಟ್ಟಿದ್ದರು ಎಂದು ತಹಶೀಲ್ದಾರ್ ಬಿ.ವಿ. ಗಿರೀಶ್‌ಬಾಬು ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಸಾಮರ್ಥ್ಯ ಸೌಧದ ಸಭಾಂಗಣದಲ್ಲಿ ಶ್ರೀ ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಅಂಗವಾಗಿ ತಾಲ್ಲೂಕು ಆಡಳಿತದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಾಜವನ್ನು ದುಶ್ಚಟಗಳಿಂದ ದೂರವಿಡಲು ಮಹಾಂತ ಶ್ರೀಗಳು ಜೋಳಿಗೆ ಕಾರ್ಯಕ್ರಮ ಕೈಗೊಳ್ಳುವ ಮೂಲಕ ಹೊಸ ಸಮಾಜ ಕಟ್ಟಲು ಮುಂದಾಗಿದ್ದರು. ಅಲ್ಲದೇ ತಮ್ಮ ಮಠದಲ್ಲಿ ನಿತ್ಯ ದಾಸೋಹ ನಡೆಸುವ ಮೂಲಕ ಮಾದರಿಯಾಗಿದ್ದರು ಎಂದರು.

ಯುವ ಸಮೂಹವು ದುಶ್ಚಟಕ್ಕೆ ಮಾರುಹೊಗದೇ, ಮಹಾಂತ ಶ್ರೀಗಳ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸತ್ಪ್ರಜೆಗಳಾಗಬೇಕು ಎಂದು ಸಲಹೆ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಹಾಲಸ್ವಾಮಿ ಮಾತನಾಡಿ, ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮ ಕುರಿತು ಉಪನ್ಯಾಸ ನೀಡಿದರು.


ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಷಣ್ಮುಖಪ್ಪ, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ್, ವಿವಿಧ ಶಾಲೆಯ ಮಕ್ಕಳು, ಶಿಕ್ಷಕರು ಇದ್ದರು.

# ರಂಗಭೂಮಿಯ ಕಲಾವಿದ ಕಂಚಿಕೆರೆ ನಟರಾಜ್ ನಿಧನ

ದಾವಣಗೆರೆ, ಜು. 5 - ಅನಾರೋಗ್ಯದಿಂದ ಬಳಲುತ್ತಿದ್ದ ನಗರದ ವೃತ್ತಿ ರಂಗಭೂಮಿ ಕಲಾವಿದ ಕಂಚಿಕೆರೆ ನಟರಾಜ್ ಅವರು ಇಂದು ಸಂಜೆ 7 ಗಂಟೆಗೆ ನಿಧನರಾದರು.

ನಟರಾಜ್, ವೃತ್ತಿ ರಂಗಭೂಮಿ ಹಿರಿಯ ಕಲಾವಿದರಾಗಿದ್ದ ದಿ. ಕಂಚಿಕೇರಿ ಶಿವಣ್ಣ ಅವರ ಪುತ್ರ. ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

**ಸಂತಾಪ :** ನಟರಾಜ್ ಅವರನ್ನು ಕಳೆದುಕೊಂಡು ರಂಗಭೂಮಿ ಕ್ಷೇತ್ರ ನಿಜಕ್ಕೂ ಒಂದು ರಂಗ ನಕ್ಷತ್ರವನ್ನು ಕಳೆದುಕೊಂಡಂತಾಗಿದೆ ಎಂದು ಬಯಲಾಟ ಅಕಾಡೆಮಿ ಮಾಜಿ ಸದಸ್ಯರೂ, ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷರೂ ಆದ ಎನ್.ಎಸ್. ರಾಜು ವಿಷಾದ ವ್ಯಕ್ತಪಡಿಸಿದರು.



ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಕಚೇರಿಯಲ್ಲಿ ಏರ್ಪಡಿಸಿದ್ದ ಕಂಚಿಕೆರೆ ನಟರಾಜ್ ಅವರ ಶ್ರದ್ಧಾಂಜಲಿ ಸಭೆಯನ್ನು ಕುರಿತು ಮಾತನಾಡಿದರು.

ಕಂಚಿಕೆರೆ ನಟರಾಜ್ ಅವರು ಸುಮಾರು ವರ್ಷಗಳ ಕಾಲ ಹಲವಾರು ನಾಟಕಗಳ ಮೂಲಕ ನಮ್ಮನ್ನು ರಂಜಿಸಿದವರು. ಅವರು ತಮ್ಮ ತಂದೆ ಕಂಚಿಕೆರೆ ಶಿವಣ್ಣ ನವರಂತೆ ಅದ್ಭುತ ಕಲಾವಿದರಾಗಿದ್ದರು ಎಂದು ಕಂಬನಿ ಮಿಡಿದರು.

ಇದೇ ಸಂದರ್ಭದಲ್ಲಿ ಕಲಾವಿದ ಪಿ. ಖಾದರ್ ಮಾತನಾಡಿ, ಕಂಚಿಕೆರೆ ನಟರಾಜ್ ಅವರು ಹಲವಾರು ನಾಟಕ ಕಂಪನಿಗಳಲ್ಲಿ ಭಿನ್ನ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿ ರಂಜಿಸುತ್ತಿದ್ದರು ಎಂದು ಹೇಳಿದರು.

ಶ್ರದ್ಧಾಂಜಲಿ ಸಭೆಯಲ್ಲಿ ಪಿ.ಜಿ. ಪರಮೇಶ್ವರಪ್ಪ, ಮಾರ್ತಾಂಡಪ್ಪ, ಪಿ ತಿಪ್ಪೇಸ್ವಾಮಿ, ವಿಠೋಬರಾವ್ ನಲ್ವಡೆ, ಎ. ಸೂರೇಗೌಡ್ರು, ಬಿ. ಕೊಟ್ರೇಶ್, ನೀರ್ಥಡಿ ಬಸವರಾಜ್, ಎಂ.ಎಸ್. ಶಿವಕುಮಾರ ಸ್ವಾಮಿ, ಪಿ. ಹನುಮಂತಾಚಾರಿ, ಮೂಗಬಸಪ್ಪ ಮಡ್ರಳ್ಳಿ, ನೀಲಗುಂದ ಬಸವನ ಗೌಡ್ರು ಮತ್ತಿತರರು ಭಾಗವಹಿಸಿದ್ದರು.

**ಐರಣಿ ಶೋಕ :** ಕಂಚಿಕೆರೆ ನಟರಾಜ್ ಅವರ ನಿಧನಕ್ಕೆ ತೀವ್ರ ಶೋಕ ವ್ಯಕ್ತಪಡಿಸಿರುವ ಹಿರಿಯ ರಂಗಭೂಮಿ ಕಲಾವಿದರೂ, ಪತ್ರಕರ್ತರೂ ಆದ ಬಸವರಾಜ ಐರಣಿ, ನಟರಾಜ್ ಅವರ ಅಭಿನಯ ಮತ್ತು ವ್ಯಕ್ತಿತ್ವವನ್ನು ಮೆಲಕು ಹಾಕಿದ್ದಾರೆ.

# ರೇಷ್ಮೆ ಇಲಾಖೆ ನೌಕರ ಬಷೀರ್ ಅಹಮದ್ ಸೇವಾ ನಿವೃತ್ತಿ, ಸನ್ಮಾನ



**ಜಗಳೂರು**

ಜಗಳೂರು, ಆ. 3 - ತಾಲ್ಲೂಕಿನ ರೇಷ್ಮೆ ಇಲಾಖೆಯ ತಾಂತ್ರಿಕ ಸಲಹಾ ಕೇಂದ್ರದಲ್ಲಿ ಸುದೀರ್ಘ 40 ವರ್ಷ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಜೆ.ಹೆಚ್. ಬಷೀರ್ ಅಹಮದ್ ಅವರಿಗೆ ಸನ್ಮಾನಿಸಿ ಗೌರವಿಸಿ ಬೀಳ್ಕೊಡಲಾಯಿತು.ಈ ಸಂದರ್ಭದಲ್ಲಿ ರೇಷ್ಮೆ ಇಲಾಖೆಯ ದಾವಣಗೆರೆ ಜಿಲ್ಲಾ ಉಪ ನಿರ್ದೇಶಕ ಚಂದ್ರಪ್ಪ, ಸಹಾಯಕ ನಿರ್ದೇಶಕ ಹರ್ಷ, ವಿಸ್ತರಣಾಧಿಕಾರಿಗಳಾದ ಬಾಲಸುಬ್ರಮಣ್ಯ ಜೋಯಿಸ್, ಎಂ.ಕೆ. ಧನಂಜಯ್, ಮುಖಂಡ ಪಿ.ಎಸ್. ಅರವಿಂದ್, ಜೆ.ಎ. ಪರ್ವೆಜ್ ಮತ್ತು ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

# ಹೆಚ್. ಶಿವಪ್ಪನವರ ಪುಣ್ಯಸ್ಮರಣೆ : ಪೂಜೆ



ಹರಿಹರ, ಆ. 5 - ನಗರದ ಹೊರವಲಯದ ಬನ್ನಿಕೋಡು ಗ್ರಾಮದಲ್ಲಿ ಮಾಜಿ ಸಚಿವ ಹೆಚ್. ಶಿವಪ್ಪನವರ 11ನೇ ವರ್ಷದ ಪುಣ್ಯ ಸ್ಮರಣೆ ನಿಮಿತ್ತವಾಗಿ ಅವರ ಸಮಾಧಿಗೆ ಕುಟುಂಬದ ಸದಸ್ಯರು ಇಂದು ವಿಶೇಷ ಪೂಜೆ ಅರ್ಪಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಹೆಚ್.ಎಸ್. ಅರವಿಂದ್, ಚೇತನಾ, ಜೆಡಿಎಸ್ ಜಿಲ್ಲಾ ಅಧ್ಯಕ್ಷ ಬಿ. ಚಿದಾನಂದಪ್ಪ, ನಗರಸಭೆ ಸದಸ್ಯ ಆರ್.ಸಿ, ಜಾವೇದ್, ಉಷಾ ಮಂಜುನಾಥ್, ಪರಮೇಶ್ವರಗೌಡ್ರು, ಬಿ. ಹೆಚ್. ಬಸವರಾಜ್, ಚಂದ್ರಪ್ಪ, ಮಹೇಶ್, ರಾಮು ಎಳೆಹೊಳೆ, ನವೀನ ಭಾನುವಳ್ಳಿ, ಮಂಜುನಾಥ್ ಇಂಜಿನಿಯರ್, ಅಡಕಿ ಕುಮಾರ್, ಬೇವಿನಹಳ್ಳಿ ಬಸಟ್ಟೆಪ್ಪ, ಬಸವನಗೌಡ್ರು, ರಾಮನಗೌಡ್ರು, ಅಜಯ್ ಪಾಟೀಲ್, ವಾಗೀಶ್, ನಟರಾಜ್, ತಿಪ್ಪೇಶ್, ಪ್ರವೀಣ್, ಪ್ರಭುಗೌಡ, ಹೆಚ್.ಹೆಚ್. ನಾಗರಾಜ್, ಮೋಹನ್ ಕೊಂಡಜ್ಜಿ, ರುದ್ರಮುನಿ ಇತರರು ಹಾಜರಿದ್ದರು.

# ಭದ್ರಾ ನೀರು ಬಳಕೆದಾರರಿಂದ ಬಾಗಿನ

ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ವತಿಯಿಂದ ಇಂದು ಬೆಳಗ್ಗೆ 11 ಗಂಟೆಗೆ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ ತಿಳಿಸಿದ್ದಾರೆ.

# ಪ್ರೀತಿಸು ಎಂದು ಮಾನ ಹಾನಿ: ಕಾರಾಗೃಹ ಶಿಕ್ಷೆ, 10 ಸಾವಿರ ರೂ. ದಂಡ

ದಾವಣಗೆರೆ, ಆ.2- 16 ವರ್ಷದ ಬಾಲಕಿಯನ್ನು ಪ್ರೀತಿಸು ಎಂದು ಪೀಡಿಸಿ, ಬೆದರಿಕೆ ಹಾಕಿದ್ದ ಆರೋಪಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್.ಟಿ.ಎಸ್.ಸಿ-1 ನ್ಯಾಯಾಲಯವು 6 ತಿಂಗಳು ಕಾರಾಗೃಹ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿದೆ.

ಆರೋಪಿ ನಿಟುವಳ್ಳಿಯ ಅಲ್ತಾಫ್, ನನ್ನ 16 ವರ್ಷದ ಮಗಳಿಗೆ ಪ್ರೀತಿ ಮಾಡುವಂತೆಯೂ ಇಲ್ಲದಿದ್ದರೆ ಆಸಿಡ್ ಹಾಕಿ ಮುಗಿಸುವುದಾಗಿ ಬೆದರಿಕೆ ಹಾಕುತ್ತಿದ್ದ, ಅಲ್ಲದೆ ಮಾನ ಹಾನಿ ಮಾಡಿದ್ದ ಎಂದು ಬಾಲಕಿ ತಂದೆ 2022ರ ಮಾರ್ಚ್ 23ರಂದು ದೂರು ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ ಅವರು ಆರೋಪ ಸಾಬೀತಾದ್ದರಿಂದ ಆಗಸ್ಟ್ 2ರಂದು ಆರೋಪಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಪಿರ್ಯಾದಿದಾರರ ಪರವಾಗಿ ಸರ್ಕಾರಿ ವಕೀಲರಾದ ಸುನಂದಾ ಮಡಿವಾಳರ್ ನ್ಯಾಯ ಮಂಡಿಸಿದ್ದರು.

# ಗಂಗಾಪುರದಲ್ಲಿ ರೈತನ ಆತ್ಮಹತ್ಯೆ

ರಾಣೇಬೆನ್ನೂರು, ಆ. 5- ದನದ ಕೊಟ್ಟಿಗೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಗಂಗಾಪುರದಲ್ಲಿ ನಡೆದಿದೆ. ಗಂಗಾಪುರ ಗ್ರಾಮದ ಆಕಾಶ್ ಶಿವರಾಜಪ್ಪ ಹಲವಾಗಲು (23) ಆತ್ಮಹತ್ಯೆ ಮಾಡಿಕೊಂಡ ರೈತ. ಈತನ ತಂದೆ ಹೆಸರಿಗೆ ಇರುವ ಜಮೀನಿನ ಮೇಲೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಅಂದಾಜು ನಾಲ್ಕು ಲಕ್ಷ ರೂ. ಬೆಳೆ ಸಾಲ ಬಾಕಿ ಇರುವುದಾಗಿ ಪ್ರಾಥಮಿಕ ವರದಿಯಿಂದ ತಿಳಿದು ಬಂದಿದೆ. ಈತನಿಗೆ ತಂದೆ-ತಾಯಿ, ಸಹೋದರ ಇದ್ದು, ಕಳೆದ ವರ್ಷ ಸರಿಯಾಗಿ ಮಳೆ ಬಾರದೆ ಬೆಳೆ ಹಾನಿಯಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಹೇಳಲಾಗಿದೆ.


## 16 ನೇ ವರ್ಷದ ಸವಿನೆನಪು



ದಿ. ಶ್ರೀ ಜಿ. ಯಲ್ಲಪ್ಪ



ದಿ. ಶ್ರೀ ಜಿ. ವೈ. ಹನುಮಂತರಾಯ

ನಮ್ಮೆಲ್ಲರ ಬದುಕಿಗೆ ದಾರಿದೀಪವಾಗಿ, ಪ್ರೇರಕರಾಗಿ,
ಭವಿಷ್ಯಕ್ಕೆ ಬೆಳಕಾದ ನಿಮ್ಮ ನೆನಪು ಎಂದೆಂದಿಗೂ ಅಜರಾಮರ.

ಇಂತಿ ದುಃಖತಪ್ತರು :
ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು, ಅಳಿಯಂದಿರು ಹಾಗೂ ಬಂಧುಗಳು.
ಮೆ। ಶ್ರೀ ಮಹಾಲಕ್ಷ್ಮಿ ಗನ್ನಿ ಡಿಪೋ, ದಾವಣಗೆರೆ.


# ಹಾವೇರಿಯಲ್ಲಿ ಮೈತ್ರಿ ವಿರುದ್ಧ ಕಾಂಗ್ರೆಸ್‌ನಿಂದ ಪ್ರತಿಭಟನೆ



ರಾಣೇಬೆನ್ನೂರು, ಆ.5- ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಜೆಡಿಎಸ್ ಹಾಗೂ ಬಿಜೆಪಿ ಪ್ರಯತ್ನ ನಡೆಸಿವೆ ಎಂದು ಆರೋಪಿಸಿ ಹಾವೇರಿಯಲ್ಲಿಂದು ಜಿಲ್ಲಾ ಕಾಂಗ್ರೆಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿತು. ಅಲ್ಲದೇ ರಾಜ್ಯಪಾಲರ ನಡೆಯ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಶಾಸಕ ಪ್ರಕಾಶ ಕೋಳಿವಾಡ, ಉಜನೇಶ ಬಣಕಾರ, ಬಸವರಾಜ ಶಿವಣ್ಣನವರ, ಮುಖಂಡರಾದ ಸಂಜೀವ ನೀರಲಗಿ, ಎಸ್.ಎಫ್. ಎನ್ ಗಾಜಿಗೌಡ್ರ, ಮಂಜನಗೌಡ ಪಾಟೀಲ, ಆರ್. ಶಂಕರ್, ಪ್ರೇಮಾ ಪಾಟೀಲ, ಅಜ್ಜಂಪೀರ್ ಖಾದ್ರಿ, ಶೇರು ಕಾಬೂಲಿ ಮತ್ತಿತರರಿದ್ದರು.

# ಕಾನೂನು ತಜ್ಞರ ಜೊತೆ ರಾಜ್ಯಪಾಲರ ಚರ್ಚೆ

**(1ನೇ ಪುಟದಿಂದ)** ನೋಟಿಸ್ ಅನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ತೆಗೆದುಕೊಂಡ ನಿರ್ಣಯ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ಕಳುಹಿಸಿತ್ತು.

ಅಲ್ಲದೆ, ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅವರ ಸಂಪುಟದಲ್ಲಿದ್ದ ಮುರುಗೇಶ್ ನಿರಾಣಿ, ಕೆ.ಸುಧಾಕರ್, ಶಶಿಕಲಾ ಜೊಲ್ಲೆ ಸೇರಿದಂತೆ ಐವರ ವಿರುದ್ಧ ರಾಜ ಭವನಕ್ಕೆ ದೂರುಗಳು ಬಂದಿದ್ದವು.

ಈ ದೂರುಗಳಿಗೆ ಸಂಬಂಧಿಸಿದಂತೆ ರಾಜಭವನ ಸಂಬಂಧ ಪಟ್ಟವರಿಗೆ ಪ್ರಾಸಿಕ್ಯೂಷನ್‌ಗೆ ಏಕೆ ನೀಡಬಾರದು ಎಂದು ಕೇಳಿ ನೋಟಿಸ್ ನೀಡಿತ್ತೇ ಎಂದು ಮುಖ್ಯಮಂತ್ರಿ ಅವರು ಪತ್ರ ಬರೆದು ರಾಜ್ಯಪಾಲರನ್ನು ಕೋರಿದ್ದಾರೆ.

ಸರ್ಕಾರ ಬರೆದಿರುವ ಎಲ್ಲ ಪತ್ರಗಳ ಬಗ್ಗೆಯೂ ಕೂಲಂಕುಶವಾಗಿ ಪರಿಶೀಲನೆ ನಡೆಸುತ್ತಿರುವ ರಾಜಭವನ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಮಾಹಿತಿ ಮತ್ತು ದಾಖಲೆಗಳನ್ನು ಸಂಬಂಧಪಟ್ಟವರಿಂದ ಪಡೆದುಕೊಂಡಿದೆ.

ಇದರ ಆಧಾರದ ಮೇಲೆ ಮುಖ್ಯ ಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದೇ, ಅಥವಾ ಬೇಡವೇ ಹಾಗೂ ತಮಗಿರುವ ಅಧಿ ಕಾರ ಬಳಸಿ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಿ ಮೂರು ತಿಂಗಳಲ್ಲಿ ವರದಿ ಪಡೆದುಕೊಳ್ಳುವುದೇ ಎಂಬ ಚಿಂತನೆಯಲ್ಲಿದೆ.

ಅಲ್ಲದೆ, ಪ್ರಕರಣವನ್ನು ಸಿಬಿಐಗೆ ವಹಿಸಲು ರಾಜ್ಯಪಾಲರಿಗೆ ಸಂವಿಧಾನದತ್ತ ಅಧಿಕಾರ ಇದೆಯೇ ಎಂಬ ವಿಚಾರವೂ ಸೇರಿದಂತೆ, ಹಲವು ಮಗ್ಗುಲುಗಳಲ್ಲಿ ಚರ್ಚೆ ನಡೆದಿದೆ.

ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ ಪ್ರಕರಣವನ್ನು ಕಾನೂನಾತ್ಮಕವಾಗಿ ಹಾಗೂ ರಾಜಕೀಯವಾಗಿ ಯಶಸ್ವಿಯಾಗಿ ಎದುರಿಸುತ್ತೇವೆ ಎಂದಿದ್ದಾರೆ.

ಮುಡಾ ಪ್ರಕರಣವನ್ನು ಕಾನೂನಾತ್ಮಕ ಹಾಗೂ ರಾಜಕೀಯವಾಗಿ ಸರಿಯಾಗಿ ಎದುರಿಸುತ್ತೇವೆ. ರಾಜ್ಯಪಾಲರು ನೀಡಿರುವ ಶೋಕಾಸ್ ನೋಟಿಸ್ ಹಿಂತೆಗೆದುಕೊಳ್ಳಬೇಕು. ಅದೇ ರೀತಿ ರಾಜ್ಯಪಾಲರಿಗೆ ಟಿ.ಜೆ.ಅಬ್ರಹಾಂ ನೀಡಿರುವ ದೂರನ್ನೂ ತಿರಸ್ಕರಿಸಬೇಕು ಎಂದು ಮನವಿ ಮಾಡಿದ್ದೇವೆ ಎಂದು ಹೇಳಿದರು.

ಈ ಕುರಿತು ರಾಜ್ಯಪಾಲರು ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡುವುದಾಗಿ ತಿಳಿಸಿದರು.

# ಕನಸುಗಳಿಗೆ ಕಡಿವಾಣದಿಂದ ಪ್ರಗತಿಯೇ ಕುಂಠಿತ...!

## ಮಸ್ಕ್, ಅಂಬಾನಿ ಕನಸುಗಳೇಕಿಲ್ಲ...?

ಪಶ್ಚಿಮ ಬಂಗಾಳದಲ್ಲಿ ಒಂದು ಕಾಲದಲ್ಲಿ ಕಾರ್ಮಿಕ ನಾಯಕರಾಗುವುದೇ ಕನಸಾಗಿತ್ತು. ಕಾರ್ಮಿಕ ನಾಯಕರಾಗುವುದರಿಂದ ರಾಜಕೀಯಕ್ಕೆ ಕಾಲಿಡಬಹುದು. ಉನ್ನತ ಸ್ಥಾನ ಪಡೆಯಬಹುದು ಎಂಬ ನಿರೀಕ್ಷೆ ಅವರಲ್ಲಿತ್ತು. ಈ ರೀತಿಯ ಸ್ಪರ್ಧೆಗಳು ಕಾರ್ಮಿಕ ನಾಯಕರನ್ನೇನೋ ಹುಟ್ಟು ಹಾಕಿದವು, ಆದರೆ ಉದ್ಯಮಿಗಳನ್ನು ಸೃಷ್ಟಿಸಲಿಲ್ಲ. ಒಂದು ಕಾಲದಲ್ಲಿ ಉದ್ಯಮಗಳ ಬೀಡಾಗಿದ್ದ ಪಶ್ಚಿಮ ಬಂಗಾಳ, ನಂತರದಲ್ಲಿ ತೀವ್ರ ಆರ್ಥಿಕ ಕುಸಿತ ಕಾಣಬೇಕಾಯಿತು.

ಎಲಾನ್ ಮಸ್ಕ್ ಹಾಗೂ ಮುಕೇಶ್ ಅಂಬಾನಿ ರೀತಿಯ ದಿಗ್ಗಜರಾಗುವ ಕನಸುಗಳನ್ನು ಕಾಣುವುದನ್ನು ಬಿಟ್ಟು ಕೇವಲ ಜಂಟಿ ಕಾರ್ಯದರ್ಶಿಯಾಗುವ ಕನಸಿಗೆ ಸೀಮಿತವಾಗಬೇಕೆ ? ಸಮಾಜವೇ ತನ್ನ ಯುವ ಪೀಳಿಗೆಯ ಕನಸುಗಳನ್ನು ಸರ್ಕಾರಿ ಹುದ್ದೆಗೆ ಸೀಮಿತ ಮಾಡಿದಾಗ ಅಂತಹ ಸಮಾಜದಿಂದ ಹೆಚ್ಚಿನ ನಿರೀಕ್ಷೆ ಸಾಧ್ಯವೇ? ಎಂದು ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಪ್ರಶ್ನಿಸಿದ್ದಾರೆ.




ನೀನು ದೊಡ್ಡವನಾದ ಮೇಲೆ ಏನಾಗುತ್ತೀಯ? ಎಂಬ ಪ್ರಶ್ನೆಗೆ ದಶಕಗಳ ಹಿಂದೆ ಡಾಕ್ಟರ್ ಇಲ್ಲವೇ ಇಂಜಿನಿಯರ್ ಎಂಬ ಉತ್ತರ ಸಾಮಾನ್ಯವಾಗಿ ಸಿಗುತ್ತಿತ್ತು. ಈಗ ಅದರ ಸಾಲಿಗೆ ಐಎಎಸ್ ಆಗುತ್ತೇನೆ ಎಂಬ ಉತ್ತರವೂ ಸೇರ್ಪಡೆಯಾಗಿದೆ. ಹೀಗಾಗಿಯೇ ಕಳೆದ ದಶಕದಲ್ಲಿ ಈ ಪರೀಕ್ಷೆಗೆ ಹಾಜರಾಗುವವರ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ.

ಕಳೆದ 2007ರಲ್ಲಿ ಯು.ಪಿ.ಎಸ್.ಸಿ. ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ 3.33 ಲಕ್ಷದಷ್ಟಿತ್ತು. ಅದು 2018ರಿಂದ ಹತ್ತು ಲಕ್ಷದ ಗಡಿ ದಾಟಿದೆ. ಇಷ್ಟಾದರೂ, 2007ರಲ್ಲಿ ಐನೂರರಷ್ಟು ಅಭ್ಯರ್ಥಿಗಳು ಆಯ್ಕೆಯಾಗಿದ್ದರೆ, ಈಗ ಸಾವಿರದಷ್ಟು ಅಭ್ಯರ್ಥಿಗಳು ಮಾತ್ರ ಆಯ್ಕೆಯಾಗುತ್ತಿದ್ದಾರೆ. ಪರೀಕ್ಷೆಗೆ ಹಾಜರಾಗುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದರಿಂದ ಸ್ಪರ್ಧೆಯೂ ಏರಿಕೆಯಾಗಿದೆ.

ಆದರೆ, ಈ ಸ್ಪರ್ಧೆಯಿಂದ ಅನಾಹುತಗಳೂ ಹೆಚ್ಚಾಗಿವೆ. ಐಎಎಸ್ ಹುದ್ದೆಗಳನ್ನು ಪಡೆಯಲು ವರ್ಷಗಟ್ಟಲೆ ಬೆವರು ಹರಿಸಬೇಕಿದೆ. ಇದಕ್ಕಾಗಿ ಕೋಚಿಂಗ್ ಕೇಂದ್ರಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಯುವ ಪೀಳಿಗೆ ಈ ಪರೀಕ್ಷೆಗೆ ಶ್ರಮಿಸುವ ಒತ್ತಡವೂ ಏರುತ್ತಿದೆ.

ದೆಹಲಿಯಲ್ಲಿ ಐಎಎಸ್ ಕೋಚಿಂಗ್ ಕೇಂದ್ರ ಒಂದರಲ್ಲಿ ನಡೆದ ಅವಘಡದ ಕಾರಣದಿಂದಾಗಿ ಕೋಚಿಂಗ್ ಕೇಂದ್ರಗಳ ಹಾವಳಿ ಕುರಿತು ತಕ್ಕ ಮಟ್ಟಿಗೆ ಚರ್ಚೆ ಆರಂಭವಾಗಿದೆ. ಆದರೆ ಚರ್ಚೆಯ ದಿಕ್ಕು ದೆಸೆ ಮಾತ್ರ ಕೋಚಿಂಗ್ ಕೇಂದ್ರಗಳ ಸುತ್ತ ಸೀಮಿತವಾಗಿದೆ.

ಮೂಲ ಸಮಸ್ಯೆ ಬಗ್ಗೆ ಚರ್ಚೆ ನಡೆಯುವ ಅಗತ್ಯವಿದೆ. ಈ ಬಗ್ಗೆ ಅಧಿಕಾರಸ್ಥರು ಗಮನ ಹರಿಸುತ್ತಿಲ್ಲ ಎನ್ನಿಸುತ್ತಿದೆ. ರಾಜಸ್ಥಾನದ ಕೋಟಾ ಮುಂತಾದ ಕೋಚಿಂಗ್ ತಾಣಗಳಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ಈ ಹಿಂದೆ ಸಾಕಷ್ಟು ಚರ್ಚೆಯಾಗಿತ್ತು. ಸರ್ಕಾರ ಒಂದಿಷ್ಟು ಮಾರ್ಗಸೂಚಿಗಳನ್ನು ಪ್ರಕಟಿಸಿ ಈ ವಿಷಯಕ್ಕೆ ತೆರೆ ಎಳೆದಿತ್ತು. ಈ ಬಾರಿಯೂ ಐಎಎಸ್ ಕೋಚಿಂಗ್ ಕೇಂದ್ರಗಳ ವಿಷಯದಲ್ಲಿ ಇದೇ ಆಗುವುದರಲ್ಲಿ ಅನುಮಾನಗಳಿಲ್ಲ.

ಕೇಂದ್ರ ಸರ್ಕಾರ ಯು.ಪಿ.ಎಸ್.ಸಿ. ಪರೀಕ್ಷೆಯ ಮೂಲಕ ಐಎಎಸ್, ಐಪಿಎಸ್, ಐಆರ್‌ಎಸ್, ಐಎಫ್‌ಎಸ್ ಮುಂತಾದ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತದೆ. ಆದರೆ, ಐಎಎಸ್ ಹುದ್ದೆಯ ಖದರ್ ಯಾವ ರೀತಿ ಇದೆ ಎಂದರೆ ಯುಪಿಎಸ್‌ಸಿ ಪರೀಕ್ಷೆಯೂ ಐಎಎಸ್ ಪರೀಕ್ಷೆ ಎಂದೇ ಹೆಸರಾಗಿದೆ. ಐಆರ್‌ಎಸ್ ಮುಂತಾದ ಹುದ್ದೆಗಳಿಗೆ ಆಯ್ಕೆಯಾದವರೂ ಸಮಾಧಾನವಿಲ್ಲದೇ ಐಎಎಸ್ ಆಗಲು ಮತ್ತೆ ಪರೀಕ್ಷೆ ಬರೆಯುವುದೂ ಕಂಡು ಬಂದಿದೆ.

ಮಹಾರಾಷ್ಟ್ರದ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರು ಅಡ್ಡದಾರಿಯಿಂದ ಉತ್ತೀರ್ಣರಾದ ಬಗ್ಗೆ ಇತ್ತೀಚೆಗೆ ತಕ್ಕ ಮಟ್ಟಿಗೆ ಚರ್ಚೆ ನಡೆದಿತ್ತು. ಇದೇ ರೀತಿ ಹಲವರು ಉತ್ತೀರ್ಣರಾದ ಬಗ್ಗೆ ಶಂಕೆಯೂ ಉಂಟಾಗಿತ್ತು. ಆದರೆ ವೈದ್ಯಕೀಯ ಪರೀಕ್ಷೆಗೆ ನಡೆಯುವ ನೀಟ್ - ಯುಜಿ ಅಕ್ರಮಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಲಾದ ಗಂಭೀರ ಕ್ರಮಗಳು ಐಎಎಸ್ ಪರೀಕ್ಷೆಯ ವಿಷಯದಲ್ಲಿ ಕಂಡುಬರಲಿಲ್ಲ. ಈಗಲೂ ಕೋಚಿಂಗ್ ಕೇಂದ್ರಗಳ ಸುತ್ತಕ್ಕೆ ಚರ್ಚೆ ಸೀಮಿತವಾಗಿದೆ.

ಈ ವಿಷಯ ಕುರಿತಂತೆ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಅವರು ಕೆಲ ತಿಂಗಳ ಹಿಂದೆ ಗಂಭೀರ ಪ್ರಶ್ನೆ ಮುಂದಿಟ್ಟಿದ್ದರು. ಭಾರತದ ಯುವ ಪೀಳಿಗೆ ಎಲಾನ್ ಮಸ್ಕ್, ಮುಕೇಶ್ ಅಂಬಾನಿ ಮುಂತಾದ ಬೃಹತ್ ಉದ್ಯಮಿಗಳಂತೆ ನಾವಾಗಬೇಕು ಎಂಬ ಆದರ್ಶ ಹೊಂದಿಲ್ಲ. ಅವರ ಕನಸುಗಳು ಸರ್ಕಾರದ ಜಂಟಿ ಕಾರ್ಯದರ್ಶಿ ಹುದ್ದೆಗೆ ಸೀಮಿತವಾಗಿವೆ ಎಂದು ವಿಷಾದಿಸಿದ್ದರು.


ಐಎಎಸ್ ರೀತಿಯ 'ಸಣ್ಣ' ಹುದ್ದೆಗಳಿಗೆ ಕನಸು ಕಾಣಬೇಡಿ, ದೊಡ್ಡ ಮಟ್ಟದ ಆಕಾಂಕ್ಷೆ ಹೊಂದಿ ಎಂದು ಸನ್ಯಾಲ್ ಸಲಹೆ ನೀಡಿದ್ದರು. ಸಮಾಜವು ಸಣ್ಣ ಕನಸುಗಳಿಗೆ ಸೀಮಿತವಾದರೆ ದೊಡ್ಡ ಸಮಸ್ಯೆಗಳು ಎದುರಾಗುತ್ತವೆ ಎಂದೂ ಅವರು ಎಚ್ಚರಿಸಿದ್ದರು.

ಬಿಹಾರದಲ್ಲಿ ಐಎಎಸ್ ಅಧಿಕಾರಿಗಳಾಗುವ ಗೀಳು ಹೆಚ್ಚಾಗಿದೆ. ಪಕ್ಕದ ಪಶ್ಚಿಮ ಬಂಗಾಳದಲ್ಲಿ ಕಾರ್ಮಿಕ ನಾಯಕರಾಗುವ ಗೀಳು ಹೆಚ್ಚಾಗಿತ್ತು. ಉದ್ಯಮಿ, ಕ್ರೀಡಾಪಟು, ಚಿತ್ರ ತಾರೆ, ಕಲಾವಿದ ಮುಂತಾದ ಕನಸುಗಳನ್ನು ಈ ರಾಜ್ಯದಲ್ಲಿರುವವರು ಕಡೆಗಣಿಸಿದ್ದರು. ಹೀಗಾಗಿ ಬಿಹಾರದಲ್ಲಿ ಹೆಚ್ಚಿನ ಸಂಖ್ಯೆಯ ಐಎಎಸ್ ಅಧಿಕಾರಿಗಳು ಬಂದರೂ, ಪಶ್ಚಿಮ ಬಂಗಾಳದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕ ನಾಯಕರು ಉದ್ಭವಿಸಿದರೂ ರಾಜ್ಯಗಳಿಗೆ ಬಡತನದ ಬೇಗೆ ತಪ್ಪಲಿಲ್ಲ ಎಂದು ಸನ್ಯಾಲ್ ಪ್ರತಿಪಾದಿಸಿದ್ದರು.

ಐಎಎಸ್ ಪರೀಕ್ಷೆಯನ್ನು ಒಂದೆರಡು ಬಾರಿ ಬರೆದು ಅಲ್ಲಿಗೆ ನಿಲ್ಲಿಸಿದ್ದರೆ ಇರುತ್ತಿರಲಿಲ್ಲ. ಆದರೆ ಲಕ್ಷಾಂತರ ಯುವಕರು ತಮ್ಮ ಉತ್ತಮ ಆಯುಷ್ಯವನ್ನು ಪರೀಕ್ಷಾ ಸಿದ್ಧತೆಗೆ ಮೀಸಲಿಡುತ್ತಿದ್ದಾರೆ. 500 ರಿಂದ ಸಾವಿರ ಹುದ್ದೆಗಳನ್ನು ಪಡೆಯಲು ಲಕ್ಷಾಂತರ ಯುವಕರು ತಮ್ಮ ಸಮಯ ಪೋಲು ಮಾಡುತ್ತಿದ್ದಾರೆ. ಇದೇ ಸಮಯವನ್ನೇ ಕ್ರೀಡೆ, ಚಲನಚಿತ್ರ, ಸಂಗೀತ, ಸಂಸ್ಕೃತಿ ಮುಂತಾದ ವಲಯಗಳಲ್ಲಿ ತೊಡಗಿಸಿದರೆ ಸಾಧನೆ ಸಾಧ್ಯವಿತ್ತು ಎಂದು ಎಂದು ಸನ್ಯಾಲ್ ಹೇಳಿದ್ದರು.

ಈ ಬಗ್ಗೆ ಗಂಭೀರವಾಗಿ ಚರ್ಚೆಗಳು ನಡೆಯಬೇಕಿದೆ. ಇದು ಕೇವಲ ಕೆಲವು ಜನರ ವಿದ್ಯಾರ್ಥಿಗಳ ಕೆಲವು ಪೋಷಕರಿಗೆ ಸಂಬಂಧಿಸಿದ ಪ್ರಶ್ನೆ ಅಲ್ಲ. ಇದು ಮುಂದಿನ ಸಮಾಜ ಹೀಗಿರಬೇಕು ಎಂದು ಚಿಂತನೆ ಮಾಡುವ ವಿಷಯವಾಗಿದೆ. ಪೋಷಕರು ತಾವು ಜೀವನಪೂರ್ತಿ ಕೂಡಿಟ್ಟ ಹಣವನ್ನು ಮಕ್ಕಳ ನಿಜವಾದ ಏಳಿಗೆಗೆ ಯಾವ ರೀತಿ ಬಳಸಲು ಸಾಧ್ಯ ಯೋಚಿಸಬೇಕಿದೆ. ಅನಾರೋಗ್ಯಕರ ಕೋಚಿಂಗ್ ಹಾಗೂ ಅನಾರೋಗ್ಯಕರ ಕನಸುಗಳ ಕಾರಣದಿಂದ ಮುಂದಿನ ಪೀಳಿಗೆಯ ಮೇಲೆ ಕರಾಳ ಪರಿಣಾಮವಾಗುವುದು ಖಂಡಿತಾ ದೇಶದ ಹಿತದಲ್ಲಿಲ್ಲ.

## ಐಎಎಸ್ ನಂತರ "ಸಣ್ಣ" ಹುದ್ದೆಗಳ ಕನಸಿನ ಬಗ್ಗೆ ಸನ್ಯಾಲ್ ಎಚ್ಚರಿಕೆಯ ಮಾತುಗಳ ಚರ್ಚೆ ಆಗಲಿದೆಯೇ..?



ಕೇವಲ ಐಎಎಸ್ ಪರೀಕ್ಷೆಯಷ್ಟೇ ಅಲ್ಲದೆ, ವಿವಿಧ ಪರೀಕ್ಷೆಗಳಿಗಾಗಿ ಕೋಚಿಂಗ್ ಕೇಂದ್ರಗಳ ಹಾವಳಿ ಹೆಚ್ಚಾಗುತ್ತಿದೆ. ಇಂಜಿನಿಯರಿಂಗ್, ವೈದ್ಯಕೀಯ ಪರೀಕ್ಷೆಗಳಿಂದ ಹಿಡಿದು ಸೈನ್ಯದ ಸೇರ್ಪಡೆವರೆಗೆ ಕೋಚಿಂಗ್ ಕ್ಲಾಸ್‌ಗಳು ಆರಂಭವಾಗಿವೆ. ಇವುಗಳಿಗೆ ಸಾಕಷ್ಟು ಹಣ ಹಾಗೂ ಅದಕ್ಕೂ ಮೀರಿ ಯುವ ಪೀಳಿಗೆಯ ಅಮೂಲ್ಯ ಆಯುಷ್ಯವನ್ನು ಅರ್ಪಿಸಬೇಕಿದೆ. ಲಾಂಗ್ ನೀಟ್, ಲಾಂಗ್ ಜೆಇಇ, ಲಾಂಗ್ ಯುಜಿ - ಪಿಜಿ ಎನ್ನುತ್ತಾ ವಿದ್ಯಾರ್ಥಿಗಳ ಆಯುಷ್ಯ ಸವೆಯುತ್ತಿದೆ.

- ಎ.ಜಿ. ಮುರಳಿ ಮೋಹನ್
ದಾವಣಗೆರೆ.

## ಪ್ರಿಯಾಂಕ ಭರತ್‌ಗೆ ಪಿ.ಎಚ್.ಡಿ ಪದವಿ



ಹರಪನಹಳ್ಳಿ, ಆ.5- ತಾಲ್ಲೂಕಿನ ಮಾಚಿಹಳ್ಳಿ ತಾಂಡಾದ ನಿವಾಸಿ ಜಿ.ಬಿ. ಪ್ರಿಯಾಂಕ ಭರತ್ ಅವರಿಗೆ ಹೈದ್ರಾಬಾದ್ ನ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಸೈನ್ಸ್ (ಬಿ.ಐ.ಟಿ.ಎಸ್) ಪಿ.ಎಚ್.ಡಿ. ಪದವಿ ಪ್ರದಾನ ಮಾಡಿದೆ.

ಬಿಐಟಿಎಸ್ ನ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಪ್ರೊ.ಬಿ.ವಿ.ವಿ.ಎಸ್.ಎನ್. ಪ್ರಭಾಕರ್ ರಾವ್ ಮಾರ್ಗದರ್ಶನದಲ್ಲಿ ಡಿಸೈನ್ ಆ್ಯಂಡ್ ಇಂಪ್ಲಿಮೆಂಟೇಷನ್ ಆಫ್ ಲೋ ಕಾಂಪ್ಲೆಕ್ಸ್ ಮೆಮರೈಸ್ಟಿವ್ ಸರ್ಕ್ಯೂಟ್ಸ್ ಯೂಸಿಂಗ್ ಮೆಷಿನ್ ಲರ್ನಿಂಗ್ ಅಲ್ಗಾರಿದಮ್ಸ್ ಫಾರ್ ಸಿಗ್ನಲ್ ಪ್ರೊಸೆಸ್ಸಿಂಗ್ ಅಪ್ಲಿಕೇಷನ್ಸ್' ವಿಷಯ ಕುರಿತು ಮಂಡಿಸಿದ ಮಹಾ ಪ್ರಬಂಧಕ್ಕೆ ಇತ್ತೀಚೆಗೆ ನಡೆದ ಬಿಐಟಿಎಸ್ ಘಟಿಕೋತ್ಸವದಲ್ಲಿ ಪಿಎಚ್ ಡಿ ಪ್ರದಾನ ಮಾಡಲಾಗಿದೆ.

ಪ್ರಿಯಾಂಕ ಅವರು, ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ಹಿರಿಯ ಪ್ರಬಂಧಕ ಎ.ಪುಟ್ಟ ನಾಯ್ಕ ಹಾಗೂ ಎ.ಪಿ. ಸರೋಜ ಅವರ ಸೊಸೆ ಹಾಗೂ ಎ. ಭರತ್ ಅವರ ಪತ್ನಿಯಾಗಿದ್ದಾರೆ.



## ಶಿವಕುಮಾರ್‌ಗೆ 'ಸೇವಾ ರತ್ನ' ಪ್ರಶಸ್ತಿ

ದಾವಣಗೆರೆ,ಆ.5- ನಗರದ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ರಕ್ತ ನಿಧಿ ಕೇಂದ್ರದ ಸಂಯೋಜಕ ಎನ್.ಜಿ ಶಿವಕುಮಾರ್ ಅವರಿಗೆ ಬೆಂಗಳೂರಿನ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಕನ್ನಡಾಂಬೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘದ ವತಿಯಿಂದ 'ಸಮಾಜ ಸೇವಾ ರತ್ನ' ರಾಷ್ಟ್ರ ಪ್ರಶಸ್ತಿಯನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

# ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಸರ್ಕಾರ ಮುಂದಾಗಲಿ

ದಾವಣಗೆರೆ, ಆ. 5 - ಖಾಸಗಿ ಶಾಲೆಗಳ ಪೈಪೋಟಿ ಎದುರಿಸಲು ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯ ಮತ್ತು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರದ ಜೊತೆಗೆ ಶಿಕ್ಷಕರು ಹಾಗೂ ಸಾರ್ವಜನಿಕರೂ ಕೈಜೋಡಿಸಲು ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ ಕರೆ ನೀಡಿದರು.

ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ 'ಸಾಮಾಜಿಕ ಕಳಕಳಿ' ಕಾರ್ಯಕ್ರಮದಡಿ ಬ್ಯಾಂಕ್ ರಾಷ್ಟ್ರೀಕರಣದ 56ನೇ ದಿನಾಚರಣೆಯ ಅಂಗವಾಗಿ ದಾವಣಗೆರೆ ತಾಲ್ಲೂಕಿನ ತುರ್ಚಘಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ವಿಭಾಗದ ಪುಟಾಣಿಗಳು ಕುಳಿತುಕೊಳ್ಳುವ ಕುರ್ಚಿಗಳನ್ನು ಕೊಡುಗೆಯಾಗಿ ನೀಡಿ ಅವರು ಮಾತನಾಡಿದರು.

ಸರ್ಕಾರಿ ಕನ್ನಡ ಶಾಲೆಗಳು ನಮ್ಮ ನಾಡಿನ ಹೆಮ್ಮೆ, ಅವುಗಳಲ್ಲಿ ಕಲಿತವರು ಅದೆಷ್ಟೋ ವಿದ್ಯಾರ್ಥಿಗಳು ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ, ಕಲೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮೆರೆದಿದ್ದಾರೆ. ಆದ್ದರಿಂದ ಖಾಸಗಿ ಶಾಲೆಗಳಿಗೆ ಅನಗತ್ಯ ಪ್ರೋತ್ಸಾಹ ನೀಡುವುದನ್ನು ಬಿಟ್ಟು ಸರ್ಕಾರಿ ಶಾಲೆಗಳನ್ನು ಸಬಲೀಕರಣ ಮಾಡಲು ಸರ್ಕಾರ ಮುಂದಾಗಬೇಕು ಎಂದು ನಾಯರಿ ಆಶಯ ವ್ಯಕ್ತಪಡಿಸಿದರು.




ಕೆನರಾ ಬ್ಯಾಂಕ್ ನಿವೃತ್ತ ನೌಕರರ ಸಂಘದ ಪ್ರಾದೇಶಿಕ ಕಾರ್ಯದರ್ಶಿ ಹೆಚ್.ಸೂಗೂರಪ್ಪ ಮಾತನಾಡಿ, ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯ ಹೆಚ್ಚಿಸಬೇಕು. ದುಃಸ್ಥಿತಿಯಲ್ಲಿರುವ ಸರ್ಕಾರಿ ಕನ್ನಡ ಶಾಲೆಗಳನ್ನು ಸರ್ಕಾರವು ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸಬೇಕು ಎಂದರು. ಶಾಲೆಯ ಮುಖ್ಯ ಶಿಕ್ಷಕಿ ಕಲ್ಪನಾ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೆನರಾ ಬ್ಯಾಂಕ್ ನೌಕರರ ಸಂಘದ ರಾಜ್ಯ ಸಮಿತಿ ಸದಸ್ಯರುಗಳಾದ ಕೆ. ವಿಶ್ವನಾಥ್ ಬಿಲ್ಲವ, ಆರ್.ಆಂಜನೇಯ, ಸಿ. ಪರಶುರಾಮ, ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಹೆಚ್.ಎಸ್. ತಿಪ್ಪೇಸ್ವಾಮಿ, ಮಾಜಿ ಅಧ್ಯಕ್ಷ ಅಜಿತ್ ಕುಮಾರ್ ನ್ಯಾಮತಿ, ಜಂಟಿ ಕಾರ್ಯದರ್ಶಿ ಅಣ್ಣಪ್ಪ ನಂದಾ, ಕೆನರಾ ಬ್ಯಾಂಕ್ ನೌಕರರ ಸಂಘದ ಚಾಂದ್ ಬಾಷಾ, ಡಿ.ಹರ್ಷದ್, ನಾಗರತ್ನಮ್ಮ, ಎಂ.ಆರ್. ಪವನ್, ಪವನ್ ಕುಮಾರ್, ಅಶ್ವಿನಿ, ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ನಾಗರಾಜ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಹನುಮಂತಪ್ಪ ಹಾಗೂ ಶಾಲೆಯ ಶಿಕ್ಷಕರಾದ ವಿ.ಎಂ. ವಿರುಪಾಕ್ಷಯ್ಯ, ಕೆ.ವೀಣಾ, ಎನ್.ಸಿ.ಸುಮಿತ್ರಾ, ಆಶಾರಾಣಿ, ಕಾವ್ಯ, ಮಂಜಮ್ಮ ಕೊಟ್ಟಿಗಿ ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ ಒತ್ತಾಯ

## ವಕ್ಫ್ ಕಾಯ್ದೆ ತಿದ್ದುಪಡಿಗೆ ಅಖಿಲೇಶ್ ವಿರೋಧ

ಲಕ್ನೌ, ಆ. 5 - 1995 ರ ವಕ್ಫ್ ಮಂಡಳಿಗಳ ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ರೂಪಿಸಿರುವ ಮಸೂದೆಯನ್ನು ವಿರೋಧಿಸುವುದಾಗಿ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ತಿಳಿಸಿದ್ದಾರೆ.

ಮಂಡಳಿಗಳಲ್ಲಿ ಹೆಚ್ಚು ಉತ್ತರದಾಯಿತ್ವ ಹಾಗೂ ಪಾರದರ್ಶಕತೆ ತರಲು ಮತ್ತು ಈ ಮಂಡಳಿಗಳಲ್ಲಿ ಮಹಿಳೆಯರನ್ನು ಕಡ್ಡಾಯವಾಗಿ ಸೇರ್ಪಡೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ತಿದ್ದುಪಡಿ ಮಸೂದೆ ಮಂಡಿಸುತ್ತಿದೆ.

ಉದ್ದೇಶಿತ ಮಸೂದೆಯ ಅನ್ವಯ ಮಂಡಳಿಗಳು ತಮ್ಮ ಆಸ್ತಿಗಳ ವಿವರಗಳನ್ನು ಜಿಲ್ಲಾಧಿಕಾರಿಗಳ ಬಳಿ ದಾಖಲಿಸಬೇಕಿದೆ. ಇದರಿಂದ ಆಸ್ತಿಗಳ ಮೌಲ್ಯ ಖಚಿತವಾಗಲಿದೆ.

ಈ ಮಸೂದೆ ವಿರೋಧಿಸುವುದಾಗಿ ಹೇಳಿರುವ ಯಾದವ್, ಬಿಜೆಪಿಯು ಮುಸ್ಲಿಂ ಸಹೋದರರ ಹಕ್ಕುಗಳನ್ನು ಕಸಿಯಲು ಮುಂದಾಗಿದೆ ಎಂದು ಆರೋಪಿಸಿದ್ದಾರೆ.

## ಅಜ್ಜಯ್ಯನ ದರ್ಶನಕ್ಕೆ ಹರಿದು ಬಂದ ಭಕ್ತರು



### ಉಕ್ಕಡಗಾತ್ರಿ

ಮಲೇಬೆನ್ನೂರು, ಆ. 5 - ಆಷಾಢ ಮಾಸದ ಕೊನೆ ದಿನ ಮತ್ತು ಭೀಮನ ಹಾಗೂ ನಾಗರ ಪಂಚಮಿ ಅಮಾವಾಸ್ಯೆ ಪ್ರಯುಕ್ತ ಸುಕ್ಷೇತ್ರ ಉಕ್ಕಡಗಾತ್ರಿಗೆ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನಕ್ಕೆ ಭಕ್ತರ ಸಮಾಗಮ ಆಯಿತು.

ಅಮಾವಾಸ್ಯೆ ಪ್ರಯುಕ್ತ ಭಕ್ತರು ತುಂಗಭದ್ರಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ, ಸರತಿ ಸಾಲಿನಲ್ಲಿ ಅಜ್ಜಯ್ಯನ ದರ್ಶನ ಪಡೆದರು. ನದಿ ತಟದಲ್ಲಿ ಭಕ್ತರು ತಮ್ಮ ತಮ್ಮ ಹರಕೆ ಅನುಸಾರ ಪೂಜೆ ಸಲ್ಲಿಸಿದರು. ತಲೆಯ ಮೇಲೆ ಕಲ್ಲನ್ನು ಹೊತ್ತು ನನ್ನ ಕಷ್ಟಗಳ ಭಾರ ಇಳಿಸು ಎಂದು ಅಜ್ಜಯ್ಯನಲ್ಲಿ ಸಂಕಲ್ಪ ಮಾಡುವುದು ಸಾಮಾನ್ಯವಾಗಿ ಕಂಡು ಬಂತು. ಹರಕೆ ಹೊತ್ತ ಭಕ್ತರು ಉರುಳು ಸೇವೆ ಸಲ್ಲಿಸಿದರು.

ಅಜ್ಜಯ್ಯನಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಅಜ್ಜಯ್ಯನ ದರ್ಶನದ ನಂತರ ಮಹಿಳೆಯರು ತಮ್ಮ ಗಂಡನ ಪಾದಗಳಿಗೆ ಪೂಜೆ ಸಲ್ಲಿಸಿ, ನಮಸ್ಕರಿಸುವ ಪದ್ಧತಿಯೂ ಅಲ್ಲಿ ಕಂಡು ಬಂತು.

ನದಿಯಲ್ಲಿ ಪ್ರವಾಹ ಕಡಿಮೆ ಆಗಿದ್ದು, ಮಳೆಯೂ ಸಹ ಅಮಾವಾಸ್ಯೆಗೆ ಬಿಡುವು ಕೊಟ್ಟಂತಿತ್ತು. ಅಂಗಡಿ ಮುಂಗಟ್ಟುಗಳಲ್ಲಿ ಹಣ್ಣು, ಕಾಯಿ, ನಿಂಬೆ ಹಣ್ಣುಗಳ ವ್ಯಾಪಾರ ಭರದಿಂದ ನಡೆಯಿತು. ನದಿ ಪ್ರವಾಹದಿಂದ ಕೆಲ ದಿನಗಳ ಕಾಲ ಭಕ್ತರ ಆಗಮನ ವಿರಳವಾಗಿತ್ತು. ಅಮಾವಾಸ್ಯೆ ಪ್ರಯುಕ್ತ ದೇವಸ್ಥಾನದ ಪ್ರಾಂಗಣದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿ ಕಂಡು ಬಂದಿತು. ನದಿ ಬಳಿ ಭಕ್ತರು ತೆರಳದಂತೆ ದೇವಸ್ಥಾನದಿಂದ ಧ್ವನಿ ವರ್ಧಕದ ಮೂಲಕ ಎಚ್ಚರಿಸಲಾಗುತ್ತಿತ್ತು.

## ಧರಾಮ ಕಾಲೇಜು ಹಳೆ ವಿದ್ಯಾರ್ಥಿಗಳಿಗೆ ಸದಸ್ಯತ್ವಕ್ಕೆ ಆಹ್ವಾನ

ದಾವಣಗೆರೆ, ಆ.5- ನಗರದ ಧರಾಮ ವಿಜ್ಞಾನ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಸಹಕಾರ ನೀಡುವಂತೆ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

ವಿವರಕ್ಕೆ ಮೊ: 96113 90375, 9448551452, 9980282121 ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಕುರಿ ಸಾಕಾಣಿಕೆ ಶಿಬಿರ

ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯು ಇಂದು ನಡೆಯಲಿದೆ. ಸಂಪರ್ಕಿಸಿ : 08192-233787.


## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಕೊಟ್ಟೂರು ರಸ್ತೆ,ಹರಪನಹಳ್ಳಿ-583131, ವಿಜಯನಗರ ಜಿಲ್ಲೆ.

e-mail:-apmchphalli1997@gmail.com

ಫೋ. : 08398-295006

ಸಂಖ್ಯೆ:ಕೃಮಾಇ/ಕೃಉಮಾಸ/ಹಹಳ್ಳಿ/ಅಭಿವೃದ್ಧಿ/ 85 /2024-25

ದಿನಾಂಕ : 05.08.2024

### ಪ್ರಕಟಣೆ

ಹರಪನಹಳ್ಳಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಶ್ರೀ ಪಿ.ಕೆ. ಮುರುಗೇಶ, ಮಾ॥ ಶ್ರೀ ಮುರುಘರಾಜೇಂದ್ರ ಟ್ರೇಡರ್ಸ್ ಎ.ಪಿ.ಎಂ.ಸಿ. ಯಾರ್ಡ್, ಹರಪನಹಳ್ಳಿ ಇವರಿಗೆ ನಿವೇಶನ ಸಂಖ್ಯೆ:24ನ್ನು ನಿಯಮಾನುಸಾರ ಲೀಸ್-ಕಂ-ಸೇಲ್ ಮೂಲಕ ಹಂಚಿಕೆ ಮಾಡಲಾಗಿದ್ದು, ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಿಸಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿದ್ದ ಹಂಚಿಕೆದಾರರಾದ ಪಿ.ಕೆ.ಮುರುಗೇಶ ಇವರು ದಿನಾಂಕ:27-08-2024 ರಂದು ಮೃತ ಪಟ್ಟಿರುತ್ತಾರೆ. ಮೃತರ ಪತ್ನಿಯಾದ ಶ್ರೀಮತಿ ಹೆಚ್.ಸರೋಜ ಇವರು ಪೋತಿ ವಾರಸು ಪ್ರಕಾರ ನಿವೇಶನ ಸಂಖ್ಯೆ:24ರಲ್ಲಿನ ಕಟ್ಟಡ ಸಹಿತ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಡುವಂತೆ, ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ನಿವೇಶನ ಸಹಿತ ಕಟ್ಟಡದ ಖಾತೆಯನ್ನು ಅರ್ಜಿದಾರರಿಗೆ ವರ್ಗಾವಣೆ ಮಾಡುವ ಬಗ್ಗೆ ಯಾವುದೇ ರೈತ ಮಾರಾಟಗಾರರು/ಪೇಟೆ ಕಾರ್ಯಕರ್ತರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ, ಈ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಾರ್ಯದರ್ಶಿ
ಕೃ.ಉ.ಮಾ.ಸ.,ಹರಪನಹಳ್ಳಿ.



## ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಚೇರಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-1.

ಫೋನ್ : 08192 256107 ಮೊಬೈಲ್ : 9449819322


### ಪ್ರತಿಭಾ ಪುರಸ್ಕಾರ ಅರ್ಜಿ ಆಹ್ವಾನ

ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ವತಿಯಿಂದ ನಮ್ಮ ಬ್ಯಾಂಕಿನ ಸದಸ್ಯರು/ಸಹಸದಸ್ಯರು ಮತ್ತು ನೌಕರರ ಮಕ್ಕಳಿಗೆ 2023-24ನೇ ಸಾಲಿನಲ್ಲಿ 10ನೇ ತರಗತಿ (ಎಸ್.ಎಸ್.ಎಲ್.ಸಿ CBSE & State Syllabus) ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿರುವಂತಹ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬ್ಯಾಂಕಿನ ಪ್ರತಿಭಾ ಪುರಸ್ಕಾರ ಯೋಜನೆಯನ್ವಯ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲು ಬ್ಯಾಂಕಿನ ಆಡಳಿತ ಮಂಡಲಿಯು ತೀರ್ಮಾನಿಸಿದೆ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಈ ಸಮಾರಂಭದಲ್ಲಿ ಸನ್ಮಾನಿಸಲಾಗುವುದು.

ಆಯ್ಕೆಗೊಂಡ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು 14ನೇ ಸೆಪ್ಟೆಂಬರ್ 2024ರಂದು ನಡೆಯುವ 2023-24ನೇ ಸಾಲಿನ ಬ್ಯಾಂಕಿನ 50ನೇ ವಾರ್ಷಿಕ ಮಹಾಸಭೆಯಲ್ಲಿ ಸರ್ವ ಸದಸ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಗುವುದು.

ಬ್ಯಾಂಕಿನ ಸದಸ್ಯರು ಮತ್ತು ನೌಕರರು ತಮ್ಮ ಮಕ್ಕಳ ಅಂಕಪಟ್ಟಿಯ ದೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ಹಾಗೂ ತಾವು ಹೊಂದಿರುವ ಸದಸ್ಯರ ಗುರುತಿನ ಕಾರ್ಡ್ ಲಗತ್ತಿಸಿ, ದಿನಾಂಕ : 30.08.2024ರೊಳಗೆ ಬ್ಯಾಂಕಿನ ಆಡಳಿತ ಕಛೇರಿಗೆ ನೀಡಲು ವಿನಂತಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಬ್ಯಾಂಕಿನ ಪ್ರಭಾರಿ ವ್ಯವಸ್ಥಾಪಕರು ಮತ್ತು ಶಾಖಾ ವ್ಯವಸ್ಥಾಪಕರುಗಳನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಸಹಿ/- ಪ್ರಭಾರಿ ಪ್ರಧಾನ ವ್ಯವಸ್ಥಾಪಕರು,
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.



WE HAVE ENDLESS CHOICES
FREE COMPUTERIZED EYE TESTING By Qualified Optometrist
Saturday We are Open
SOUTH INDIA OPTICALS
Near Ram & Co Circle, Beside Bank of Baroda, P.J. Extension, Davanagere © 08192-231432 • 08192-462073



## IN THE COURT OF THE 1st ADDITIONAL DISTRICT AND SESSIONS JUDGE AT DAVANGERE

**P: & SC.No. 33/2024**

**PETITIONERS** 1. SMT.A.M.NAGARATNA W/O HANUMANTHAPPA, Aged about 57 years, house wife, Aged about 45 years, house wife,

2. SMT.YASHODAMMA W/O M.NAGENDRAPPA, Aged about 54 years, house wife, Both are resident of 1st cross, A.K. Colony, HARIHARA **V/S**

**RESPONDENTS:** NIL

**DRAFT PAPER PUBLICATION**

Whereas the petitioners have filed the petition under section 276 of Indian succession act of 1925 seeking the relief of probate certificate on the basis of the "WILL" executed by one SMT.A.K.SHANTAMMA W/O HANUMAPPA on 26-07-2023 in respect of the Agricultural land bearing survey number 48/BK6, measuring 01 acres 39 guntas, situated at Manganakoppa village 20, situated Kengalahalli village of Sasuvehalli-02 Hobali, Honnalli taluk, bounded by: East : Channal, West: Land of Nagamma W/o Shankarappa, North: Lands of Satyakkara Basavarajappa, Parasurama, Mahantesh, South: Lands of Chowdappa, Basappa Hanumathappa. It is hereby informing to the public if any have right interest title over the said property be appear in the court of the District and sessions Judge at Davangere at about 11am on 21-08-2024 through advocate or in person.

Give under my hand and the seal of the court, this 02 day 08-2024.

**Sd/- Advocate for the petitioners (NBP/NS) Date : 2.8.2024, Davangere.**

**Sd/- Chief administrative officer District and sessions judge court, Davangere.**

# ಯಾಂತ್ರೀಕೃತ ನಾಟಿ ಯಂತ್ರದ ಸದುಪಯೋಗಕ್ಕೆ ಕರೆ

## ಕಡ್ಲೇಬಾಳು ಗ್ರಾಮದಲ್ಲಿ ಭತ್ತದ ನಾಟಿ ಯಂತ್ರಕ್ಕೆ ಚಾಲನೆ ನೀಡಿದ ಜಿಪಂ ಸಿಇಒ ಸುರೇಶ ಬಿ. ಹಿಟ್ನಾಳ್




ದಾವಣಗೆರೆ, ಆ. 5 - ಇತ್ತೀಚಿನ ದಿನಗಳಲ್ಲಿ ಕೌಶಲ್ಯ ಪೂರಕ ಕೃಷಿ ಅನುಷ್ಠಾನ ಮಾಡುವ ಕಾರ್ಮಿಕರ ಹಾಗೂ ರೈತರ ಸಂಖ್ಯೆ ಕಡಿಮೆಯಾಗುತ್ತಿದೆ. ಹಾಗಾಗಿ ನಾಟಿ ಯಂತ್ರವು ರೈತರಿಗೆ ಉಪಯೋಗವಾಗುವಂತಿದ್ದು ಪ್ರತಿಯೊಬ್ಬ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ ಬಿ. ಇಟ್ನಾಳ್ ಕರೆಕೊಟ್ಟರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲ್ಲೂಕಿನ ಹೊಸ ಕಡ್ಲೆಬಾಳು ಗ್ರಾಮದ ರಾಮಕೃಷ್ಣರವರ ಭತ್ತದ ಗದ್ದೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಯಾಂತ್ರೀಕೃತ ಭತ್ತ ನಾಟಿ ಚಾಲನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕೇವಲ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದ ಕಾರ್ಯವಷ್ಟೇ ಅಲ್ಲದೆ ಸಾಮಾಜಿಕ ಅಭಿವೃದ್ಧಿಗೆ ಪೂರಕವಾದ ಹಲವಾರು ಕೆಲಸ ಕಾರ್ಯಗಳನ್ನು ನಡೆಸುತ್ತಿದೆ ಎಂದರು.

ಸಂಸ್ಥೆಯ ಕೃಷಿ ಪ್ರಾದೇಶಿಕ ನಿರ್ದೇಶಕ ಮನೋಜ್ ಮಿನೆಜೆಸ್ ಮಾತನಾಡಿ, 'ಯಂತ್ರಶ್ರೀ' ಕಾರ್ಯಕ್ರಮವು ರೈತರಿಗೆ ಸುಲಭವಾಗಿ ಯಾವುದೇ ಕೂಲಿ ಆಳಿನ ಅವಶ್ಯಕತೆ ಇಲ್ಲದೆ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿಯನ್ನು ನಿರೀಕ್ಷಿಸುವಂತಹ ವ್ಯವಸ್ಥೆ ಆಗಿದ್ದು, ಕೂಲಿ ಆಳುಗಳ ಸಮಸ್ಯೆಯನ್ನು ನೀಗಿಸಿ, ಕ್ಷೀಣಿಸುತ್ತಿರುವ ಭತ್ತದ ಬೆಳೆಗೆ ಪುನರ್ಜನ್ಮ ನೀಡುವಂತಹ ನೂತನ ಪದ್ಧತಿಯನ್ನು ಡಾ. ಡಿ.ವೀರೇಂದ್ರ ಹೆಗ್ಗಡೆಯವರು ಪರಿಚಯಿಸಿಕೊಟ್ಟಿರುತ್ತಾರೆ ಎಂದು ಹೇಳಿದರು.

ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಮಾತನಾಡಿ, ಯಂತ್ರ ನಾಟಿ ಅನುಷ್ಠಾನಕ್ಕೆ ಅವಶ್ಯಕವಿರುವ ಭತ್ತದ ಆಯ್ಕೆ, ಬೀಜೋಪಚಾರ, ನಾಟಿ ಗದ್ದೆ ತಯಾರಿ, ನೀರು ನಿರ್ವಹಣೆ ಬಗ್ಗೆ ತಿಳಿಸಿದರು ಹಾಗೂ ಇಲಾಖೆಯ ವತಿಯಿಂದ ರೈತರಿಗೆ ನೀಡುವ ಸೌಲಭ್ಯಗಳ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಜಿಬಾಯಿ, ಸಂಸ್ಥೆಯ ನಿರ್ದೇಶಕ ಲಕ್ಷ್ಮಣ್ ಎಂ, ಜನ ಜಾಗೃತಿ ವೇದಿಕೆ ಸದಸ್ಯರಾದ ಗೌಡ್ರು ಚನ್ನಬಸಪ್ಪ, ಶ್ರೀಮತಿ ಚೇತನಾ, ಯೋಜನಾಧಿಕಾರಿ ಶ್ರೀನಿವಾಸ್ ಬಿ, ಸುಧೀರ್ ಜೈನ್, ಕೃಷಿ ಅಧಿಕಾರಿ ಪ್ರವೀಣ್ ಹಾಗೂ ಸುನೀಲ್, ವಲಯ ಮೇಲ್ವಿಚಾರಕಿ ಉಮಾ, ಉಪಾಧ್ಯಕ್ಷ ಪ್ರಭಾಕರ್, ಸೇವಾ ಪ್ರತಿನಿಧಿಗಳಾದ ರೇಖಾ, ಕೆಂಚಮ್ಮ, ನೇತ್ರಾವತಿ, ನಾಟಿಗದ್ದೆ ಮಾಲೀಕರಾದ ರೇವತಿ ಕುಮಾರ್ ಮತ್ತು ಇತರು ಉಪಸ್ಥಿತರಿದ್ದರು.

## ಸೀತಮ್ಮ ಕಾಲೇಜಿನಲ್ಲಿ ಎನ್ನೆಸ್ಸೆಸ್ ಚಟುವಟಿಕೆಗಳ ಉದ್ಘಾಟನೆ



ದಾವಣಗೆರೆ, ಆ.5- ನಗರದ ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 2024-25ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ರೆಡ್ ಕ್ರಾಸ್, ರೇಂಜರ್ಸ್ ಮತ್ತು ಎನ್ನೆಸ್ಸೆಸ್ ಚಟುವಟಿಕೆಗಳ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು. ಈ ವೇಳೆ ಕಾಲೇಜಿನ ಪ್ರಾಚಾರ್ಯ ಟಿ.ಎ. ಕುಸಗಟ್ಟಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಜಿ. ಕರಿಸಿದ್ದಪ್ಪ, ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಕೆ.ಜಿ. ಶಿವಕುಮಾರ್, ಮಾಜಿ ಮೇಯರ್ ಎಸ್.ಟಿ ವೀರೇಶ್ ಮತ್ತಿತರರಿದ್ದರು.

## ನಿರುದ್ಯೋಗಿ ಯುವಕರ ಸಂಕಷ್ಟ ಬಜೆಟ್ : ಪ್ರವೀಣ್ ನಿಟುವಳ್ಳಿ



ದಾವಣಗೆರೆ, ಆ. 5- ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಮಂಡಿಸಿದ 2024 -25 ರ ಆರ್ಥಿಕ ವರ್ಷದ ಬಜೆಟ್ ನಿರುದ್ಯೋಗಕ್ಕೆ ಶಾಶ್ವತ ಪರಿಹಾರ ರೂಪಿಸುವಲ್ಲಿ ವಿಫಲವಾಗಿದೆ ಎಂದು ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್ ನಿಟುವಳ್ಳಿ ಟೀಕಿಸಿದ್ದಾರೆ. ಜನ ವಿರೋಧಿಯಾದ ಈ ಬಜೆಟ್ ಕುರಿತು ಹೇಳಿಕೆ ನೀಡಿರುವ ಅವರು, ದೇಶದ ಜನರು ಎದುರಿಸುತ್ತಿರುವ ನೈಜ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆ.

ಸಂವಿಧಾನದ ಮೂಲಭೂತ ತತ್ವಗಳಾದ ಆರ್ಥಿಕ ಸಮೀಕ್ಷೆ ವರದಿಯು ದೇಶವು ನಿರುದ್ಯೋಗ ಸಮಸ್ಯೆ ಎದುರಿಸಲು ಸಾಧ್ಯವಾಗಲು ಕೃಷಿಯೇತರ ವಲಯದಲ್ಲಿ ವಾರ್ಷಿಕವಾಗಿರುವ ಸುಮಾರು 78.51 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಅಗತ್ಯವಿದೆ ಎಂದು ಸೂಚಿಸುತ್ತದೆ ಎಂದಿದ್ದಾರೆ.

## ಮುಕ್ತ ಚರ್ಚೆಗೆ ಸಿದ್ಧ; ಪೀಠಕ್ಕೆ ಅಂಟಿಕೊಂಡಿಲ್ಲ



(1ನೇ ಪುಟದಿಂದ) ಆಗಬಾರದು ಎಂದು ಜಗದ್ಗುರುಗಳು ಸಲಹೆ ನೀಡಿದರು.

ಮಠದ ಆಡಳಿತ ಸೇರಿ ಎಲ್ಲಾ ಕಾರ್ಯಗಳು ಪಾರದರ್ಶಕವಾಗಿವೆ. ಮಠದಿಂದ ಉಚ್ಚಾಟನೆಯಾದವರು, ಉಪಕಾರ ಪಡೆದು ಮಠಕ್ಕೆ ಕೆಟ್ಟ ಹೆಸರು ತರಲು ಹೊರಟಿದ್ದಾರೆ. ಇಂತಹ ಆರೋಪಕ್ಕೆ ಜಗ್ಗಲ್ಲ, ಬಗ್ಗಲ್ಲ. ನಿಮ್ಮ ಬಳಿ ಏನೇ ಇದ್ದರೂ ಅವ್ಯವಹಾರ ಸಾಕ್ಷಿ ಇದ್ದರೂ, ಸಾಕ್ಷಿ ಸಮೇತ ಮಠಕ್ಕೆ ಬರಲಿ, ಸಮಾಜದವರೆಲ್ಲರೂ ಸೇರಿ ಒಟ್ಟಾಗಿ ಕುಳಿತು ಚರ್ಚಿಸಲಿ. ಅದನ್ನು ಬಿಟ್ಟು ಎಲ್ಲೋ ಸಭೆ ನಡೆಸಿ, ಆರೋಪ ಮಾಡಿದರೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸತ್ಯವಿದ್ದರೆ ಆರೋಪ ಮಾಡಬೇಕು. ಯಾರನ್ನೋ ಮೆಚ್ಚಿಸಲು ಆರೋಪ ಸರಿಯಲ್ಲ ಎಂದು ತಿಳಿಸಿದರು.

**ಭಕ್ತರ ಮನವಿ :** ನೆರೆದ ಭಕ್ತರು, ನೀವೇ ಮುಂದುವರಿಯಬೇಕು. ಕೊನೆಯ ಉಸಿರು ಇರುವವರೆಗೂ ಪೀಠಾಧಿಪತಿಗಳಾಗಿ ಇರಬೇಕು. ನಿಮ್ಮ ಕೃಪೆಯಿಂದ ಕೆರೆಗಳು ತುಂಬಿ, ಹಳ್ಳಿಗಳಿಗೆ ನೀರಾವರಿ ಸೌಲಭ್ಯ ಸಿಕ್ಕಿದೆ. ಯಾವ ಒತ್ತಡಕ್ಕೂ ಜಗ್ಗದೆ ಮಠವನ್ನು ಮುನ್ನಡೆಸಿಕೊಂಡು ಬಂದಿದ್ದೀರಿ. ದಾವಣಗೆರೆಯ ಸಭೆ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಸದ್ಭಕ್ತರು ನಿಮ್ಮೊಟ್ಟಿಗೆ ಇದ್ದಾರೆ ಎಂದರು.

ನೀವು ಪೀಠ ತ್ಯಜಿಸುವುದಾಗಿ ಹೇಳಿದಾಗಲೂ ನಾವೆಲ್ಲರೂ ಸೇರಿ ನಿಮ್ಮನ್ನೇ ಮುಂದುವರೆಸಿದ್ದೆವು. ಭಕ್ತರ ಪ್ರೀತಿಯ ಒತ್ತಾಯಕ್ಕೆ ಮಣಿದು ಮುಂದುವರೆದಿದ್ದೀರಿ. ಈಗಲೂ ಆತುರದ ನಿರ್ಧಾರ ಬೇಡ ಎಂದು ಮನವಿ ಮಾಡಿದರು.

## ಜಿ ಬೇವಿನಹಳ್ಳಿ : ಪ್ರೌಢಶಾಲೆಯಲ್ಲಿ ಶೌಚಾಲಯ, ವಿಶ್ರಾಂತಿ ಕೊಠಡಿ ಉದ್ಘಾಟನೆ

ಮಲೇಬೆನ್ನೂರು, ಆ. 5- ಜಿ.ಬೇವಿನಹಳ್ಳಿ ಗ್ರಾಮದ ಶ್ರೀ ಸಿದ್ದಲಿಂಗೇಶ್ವರ ಅನುದಾನಿತ ಪ್ರೌಢಶಾಲೆಯಲ್ಲಿ ಬೆಂಗಳೂರಿನ ಪವರ್ ಸ್ಕೂಲ್ ಕಂಪನಿ ಹಾಗೂ ಇಂಡಿಯಾ ಸುದಾರ್ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಬಾಲಕಿಯರ ಹೈಟೆಕ್ ಶೌಚಾಲಯ ಹಾಗೂ ವಿಶ್ರಾಂತಿ ಕೊಠಡಿಯನ್ನು ಪವರ್ ಸ್ಕೂಲ್ ಕಂಪನಿಯ ಸಿಎಸ್‌ಆರ್ ಮುಖ್ಯಸ್ಥ ಪ್ರಕಾಶಂ ಅವರು ಶನಿವಾರ ಉದ್ಘಾಟಿಸಿದರು.



ನಂತರ ಮಾತನಾಡಿದ ಪ್ರಕಾಶಂ ಅವರು, ಮಕ್ಕಳು ಗುರಿ ತಲುಪುವವರೆಗೂ ಶ್ರಮವಹಿಸಿ ಅಧ್ಯಯನ ಮಾಡಬೇಕು. ಜೊತೆಗೆ ತಂದೆ - ತಾಯಿಗಳಿಗೆ, ಓದಿದ ಶಾಲೆಗೆ, ಅಕ್ಷರ ಕಲಿಸಿದ ಗುರುಗಳಿಗೆ ಒಳ್ಳೆಯ ಹೆಸರು ತನ್ನಿ ಎಂದರು.

ಇನ್ನೋರ್ವ ಸಿಎಸ್‌ಆರ್ ಸದಸ್ಯ ಸೌಂದರ್ಯ ರಾಜನ್ ಮಾತನಾಡಿ, ಕಷ್ಟಪಟ್ಟು ಓದಿದರೆ ದೊಡ್ಡ ದೊಡ್ಡ ಕಂಪನಿಗಳಲ್ಲಿ ಉನ್ನತ ಸ್ಥಾನ ಮತ್ತು ಉತ್ತಮ ವೇತನ ಪಡೆಯಬಹುದು ಎಂದು ಹೇಳಿದರು. ತಾ.ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಶರಣ ಕುಮಾರ್ ಹೆಗಡೆ ಮಾತನಾಡಿ, ಈ ವರ್ಷದಲ್ಲಿ ಎರಡು ಶೌಚಾಲಯ ನಿರ್ಮಿಸಿದ ಪವರ್ ಸ್ಕೂಲ್ ಸಂಸ್ಥೆಯ ಮುಖ್ಯಸ್ಥರಾದ ಪ್ರಕಾಶಂ, ಸೌಂದರ್ಯ ರಾಜನ್, ಚೇತನ್ ಕೀರ್ತಿ ಅವರಿಗೆ ಧನ್ಯವಾದಗಳನ್ನು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕ ಉಮೇಶ್, ಇಂಡಿಯಾ ಸುಧಾರ್ ಸಂಸ್ಥೆಯ ಮುಖ್ಯಸ್ಥ ವಿನೋದ್ ಮುರುಗೋಡ್, ಶಾಲೆಯ ಶಿಕ್ಷಕರಾದ ನಾಗರಾಜ್, ರವೀಂದ್ರ, ಎಸ್‌ಡಿಎಂಸಿ ಪದಾಧಿಕಾರಿಗಳು ಹಾಜರಿದ್ದರು.

## 'ಕಾಯಕ ನಿಷ್ಠೆ' ಸಿದ್ಧರಾಮ ಸಂಸ್ಕೃತಿಯ ಆಧಾರ

(1ನೇ ಪುಟದಿಂದ) ಮಾಧ್ಯಮವಾಯಿತು ಎಂದು ಹೇಳಿದರು.

ಜನರನ್ನು ಪ್ರೀತಿಯಿಂದ ಕಾಣುವ ಜನಮುಖಿ ವ್ಯಕ್ತಿತ್ವ. ಸಮಾಜದ ಕಷ್ಟಕೋಟಲೆಗಳಿಗೆ ತುಡಿಯುವ, ಸ್ಪಂದಿಸುವ ತಾಯಿ ಹೃದಯ. ನೋಂದವರನ್ನು, ಮಹಿಳೆಯರನ್ನು, ಅಶಕ್ತರನ್ನು ಪ್ರೀತಿಯಿಂದ ಕಾಣುವ ಅವರಿಗೆ ಬದುಕನ್ನು ಕಲ್ಪಿಸಿಕೊಡುವ ಅಂತಃಕರಣ ಅವರಲ್ಲಿತ್ತು ಎಂದರು.

ದೇಹವನ್ನೇ ದೇಗುಲವಾಗಿಸಿಕೊಂಡ, ಶರಣ ಸಂಸ್ಕೃತಿಯನ್ನು ಒಪ್ಪಿಕೊಂಡು ತನ್ನ ತನವನ್ನು ಉಳಿಸಿಕೊಂಡು ಮೇರು ಮಟ್ಟಕ್ಕೆ ಬೆಳೆದದ್ದು ಸಿದ್ಧರಾಮರ ಸಂಸ್ಕೃತಿ ಎಂದು ಹೇಳಿದರು.

ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಮಾತನಾಡಿ, ಸಿದ್ಧರಾಮರ ಆದ್ಯ ಉದ್ದೇಶವೇ ವ್ಯಕ್ತಿಗತ ಪರಿವರ್ತನೆ. ವ್ಯಕ್ತಿ ಪರಿವರ್ತನೆಗೊಂಡರೆ, ಸಹಜವಾಗಿಯೇ ಸಮುದಾಯದ ಪರಿವರ್ತನೆಗೆ ಸಿದ್ಧರಾಮ ಒಂದು ಉಜ್ವಲ ನಿದರ್ಶನ. ಲಕ್ಷ ಲಕ್ಷ ಸಂಖ್ಯೆಯಲ್ಲಿದ್ದ ಭಕ್ತ ಸಮುದಾಯವೆಲ್ಲ ಸ್ವಾಭಾವಿಕವಾಗಿಯೇ ಸಿದ್ಧರಾಮ ಶರಣರ ಮಾರ್ಗವನ್ನು ಅನುಸರಿಸಲಿ ಎಂದು ಹಿತ ನುಡಿದರು.

ಅಂಬಿಗರ ಚೌಡಯ್ಯ ಗುರುಪೀಠದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಮಾತನಾಡಿ, ಶುಷ್ಕ ಆಚರಣೆಗಳು, ಮೂಢನಂಬಿಕೆಗಳು, ಕಂದಾಚಾರಗಳು, ಡಾಂಭಿಕ ಆಚರಣೆಗಳು, ನಡೆ-ನುಡಿಯಲ್ಲಿ ಹೊಂದಾಣಿಕೆಯಿಲ್ಲದ ನೈತಿಕ ಹೀನಸ್ಥಿತಿ, ದೀನ-ದಲಿತರ ಶೋಷಣೆಗಳನ್ನು ಕಂಡು ಅವರ ಮನಸ್ಸು ಮರುಗಿತು. ಸರ್ವಜೀವಿಗಳಿಗೆ ಒಳಿತನ್ನು ಉಂಟು ಮಾಡುವ ಸಂಕಲ್ಪದಿಂದ ಸಿದ್ಧರಾಮರು ತರ-ತಮ ಭಾವವಿಲ್ಲದ ಸಮಾನತೆಯ ಸುಂದರ ಸಮಾಜವನ್ನು ನಿರ್ಮಿಸಲು ನಿರ್ಧರಿಸಿದರು ಎಂದರು.

ಅಂಧಾನುಕರಣೆ, ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಗಳ ವಿರುದ್ಧ ಸಮರವನ್ನೇ ಸಾರಿದರು. ದಯೆ, ಕರುಣೆಗಳೇ ಧರ್ಮದ ಹೃದಯವೆಂದು ಒತ್ತಿ ಹೇಳಿದ ಶ್ರೀಗಳು, ಮಾನವೀಯತೆ, ಅನುಕಂಪಗಳು ಧರ್ಮದ ತಳಹದಿಗಳಾಗಿರಬೇಕೆಂದು ಮನವರಿಕೆ ಮಾಡಿಕೊಟ್ಟರು.

### ರಥೋತ್ಸವಕ್ಕೆ ಜಾನಪದ ಮೆರಗು

ವೆಂಕಾಭೋವಿ ಕಾಲೋನಿಯ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ ಶಾಖಾ ಮಠದಿಂದ ಪ್ರಾರಂಭವಾದ ಸಿದ್ಧರಾಮೇಶ್ವರ ರಥೋತ್ಸವದ ಮೆರವಣಿಗೆಗೆ ವಿವಿಧ ಜಾನಪದ ಕಲಾತಂಡಗಳು ಮೆರಗು ನೀಡಿದವು.

ಪೂಜಾ ಕುಣಿತ, ಹುಲಿವೇಷ, ಹಗಲು ವೇಷಧಾರಿಗಳು, ಕಂಸಾಳೆ, ಗಾರುಡಿ ಗೊಂಬೆ, ಕೀಲುಕುದುರೆ, ನಂದಿಕೋಲು, ಡೊಳ್ಳು ಕುಣಿತ, ತಮಟೆ ವಾದನ, ನಾಸಿಕ್ ಡೋಲ್ ಸೇರಿದಂತೆ ವಿವಿಧ ಭಾಗಗಳಿಂದ ಆಗಮಿಸಿದ ಕಲಾ ತಂಡಗಳು ತಮ್ಮ ಪ್ರದರ್ಶನದ ಮೂಲಕ ಗಮನ ಸೆಳೆದವು.

ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಸಿದ್ಧರಾಮನ ಜೀವನವನ್ನು ಗಮನಿಸಿದಾಗ, ಅವನಿಗೆ ಆತ್ಮಜ್ಞಾನಿ ಅಲ್ಲಮಪ್ರಭುವಿನ ದರ್ಶನವಾಗುವವರೆಗೆ, ನಾಥ ಪರಂಪರೆ ಚಿಂತನೆಯ ಪಾರಮಾರ್ಥ, ಇಹ-ಪರ, ಸ್ವರ್ಗ-ನರಕ, ಮಡಿ-ಮೈಲಿಗೆ, ಪೂರ್ವಜನ್ಮ- ಪುನರ್‌ಜನ್ಮ, ವರ್ಣ-ವರ್ಗ, ಸ್ತ್ರೀ-ಪುರುಷ, ಶಾಂತಿ-ಸಮಾರಾಧನೆ, ತೀರ್ಥಯಾತ್ರೆ, ಹೋಮ-ಹವನ, ಪೂಜೆ-ಹರಕೆ, ಗುಡಿ-ಗುಂಡಾರ ಇಂತಹ ಅರ್ಥಹೀನ ಪದ್ಧತಿ ಮತ್ತು ಆಚರಣೆಗಳೇ ಧರ್ಮವೆಂಬ ನಂಬಿಕೆಯಲ್ಲಿದ್ದರು ಎಂದರು. ಆದರೆ ಶರಣ ಸಿದ್ಧಾಂತದ ಗುರು-ಲಿಂಗ-ಜಂಗಮದ ಅರಿವಾದ ನಂತರ, ಕಾಯಕ, ದಾಸೋಹ, ಅನುಭಾವಗಳು ಅರ್ಥವಾದಾಗ ಅವರು ಪೂರ್ಣ ಪರಿವರ್ತನೆಗೊಳ್ಳುತ್ತಾನೆ ಎಂದು ಹೇಳಿದರು.

ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ಶ್ರೀ ಬಸವ ಮಾಚಿದೇವ ಸ್ವಾಮೀಜಿ, ಶ್ರೀ ರೇಣುಕಾನಂದ ಸ್ವಾಮೀಜಿ, ಶ್ರೀ ಅನ್ನದಾನಿ ಭಾರತೀಯ ಅಪ್ಪಣ್ಣ ಸ್ವಾಮೀಜಿ, ಶ್ರೀ ಕುಂಬಾರ ಗುಂಡಯ್ಯ ಸ್ವಾಮೀಜಿ, ಶ್ರೀ ಇಮ್ಮಡಿ ಮೇದಾರ ಕೇತೇಶ್ವರ ಸ್ವಾಮೀಜಿ, ಕೊರಟಿಕೆರೆಯ ಶ್ರೀ ಮಹಾಲಿಂಗ ಸ್ವಾಮೀಜಿ, ಹೊಸಕಲ್ಲಿನ ಶ್ರೀ ಬಸವ ರಮಾನಂದ ಸ್ವಾಮೀಜಿ, ಶಿಕಾರಿಪುರದ ಶ್ರೀ ಚನ್ನಬಸವ ಸ್ವಾಮೀಜಿ, ಚನ್ನೇನಹಳ್ಳಿಯ ಶ್ರೀ ಬಸವಲಿಂಗ ಮೂರ್ತಿ ಸ್ವಾಮೀಜಿ, ಗುರುಮಠಕಲ್ಲಿನ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶ್ರೀ ಭೃಂಗೇಶ್ವರ ಸ್ವಾಮೀಜಿ, ತಿಳುವಳ್ಳಿ ಬಸವ ನಿರಂಜನ ಸ್ವಾಮೀಜಿ, ಕಲ್ಕೆರೆ ತಿಪ್ಪೇರುದ್ರ ಸ್ವಾಮೀಜಿ, ಅಗಡಿಯ ಗುರುಲಿಂಗ ಸ್ವಾಮೀಜಿ ಸೇರಿದಂತೆ ಇನ್ನಿತರರು ಸಮ್ಮುಖ ವಹಿಸಿದ್ದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ರವಿಕುಮಾರ್, ಮಾಜಿ ನಿರ್ದೇಶಕ ಕಾಳಘಟ್ಟ ಹನುಮಂತಪ್ಪ, ಭೋವಿ ಗುರುಪೀಠದ ಧರ್ಮದರ್ಶಿ ಹೆಚ್.ಜಯಣ್ಣ, ಯುವ ಮುಖಂಡ ಜಿ.ಬಿ. ವಿನಯ್ ಕುಮಾರ್, ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಹೆಚ್. ಗೋಪಾಲ್, ಎ. ನಾಗರಾಜ್, ಅಯೂಬ್ ಪೈಲ್ವಾನ್, ಗಡಿಗುಡಾಳ್ ಮಂಜುನಾಥ, ಟಿ. ಮಂಜುನಾಥ್, ಶ್ರೀನಿವಾಸ್, ಉಮಾ, ಶಿವಶಂಕರ್ ಶಿಲ್ಪಿ, ರಾಜಣ್ಣ, ದಶರಥ, ಎಸ್.ಜಿ. ಸೋಮಶೇಖರ್, ಜಿ. ರವಿಕುಮಾರ್, ಜಿ. ಶೇಖರಪ್ಪ, ಹರಪನಹಳ್ಳಿ ವೀರಭದ್ರಪ್ಪ, ಅರ್ಜುನ್ ಜಗಳೂರು, ವೀರೇಶ್, ಚಾಮರಾಜ, ದಿನೇಶ್ ನ್ಯಾಮತಿ, ಪ್ರವೀಣ್, ಮಂಜಪ್ಪ ಮತ್ತಿತರರು ಭಾಗವಹಿಸಿದ್ದರು.

## 6 ವರ್ಷದ ಬಾಲಕಿಗೆ ಲಿವರ್ ಶಸ್ತ್ರ ಚಿಕಿತ್ಸೆ ಧನ ಸಹಾಯಕ್ಕೆ ಬಡ ಪೋಷಕರ ಮನವಿ

ದಾವಣಗೆರೆ, ಆ. 5 - 6 ವರ್ಷದ ಜಿ.ಶ್ರಾವಣಿ ತನ್ನ ಮಗಳಿಗೆ ತುರ್ತಾಗಿ ಲಿವರ್ ಶಸ್ತ್ರ ಚಿಕಿತ್ಸೆಯ ಅಗತ್ಯವಿದ್ದು, ವೈದ್ಯರು 25 ಲಕ್ಷ ರೂ. ಖರ್ಚಾಗಲಿದೆ ಎಂದು ತಿಳಿಸಿದ್ದಾರೆ. ದಾನಿಗಳು ಧನ ಸಹಾಯ ಮಾಡುವಂತೆ ಬಾಲಕಿಯ ತಂದೆ ತಳವಾರ ಕೇರಿ ನಿವಾಸಿ ಜಿ. ಗುರುಪ್ರಸಾದ್ ಮನವಿ ಮಾಡಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಿಸಿದಾಗಲೇ ಮಗಳು ಅನಾರೋಗ್ಯಕ್ಕೆ ತುತ್ತಾದಳು. ಇಲ್ಲಿಯವರೆಗೆ ಅವಳ ಚಿಕಿತ್ಸೆಗಾಗಿ 5 ಲಕ್ಷ ರೂ. ಖರ್ಚಾಗಿದೆ. ತುರ್ತಾಗಿ ಲಿವರ್ ಬದಲಿಸಬೇಕಾಗಿದ್ದು, ಬೆಂಗಳೂರಿನ ಖಾಸಗಿ ಆಸ್ಪತ್ರೆ ವೈದ್ಯರು 25 ಲಕ್ಷ ರೂ. ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಅಡುಗೆ ಕೆಲಸ ಮಾಡುತ್ತಾ ಜೀವನ ನಡೆಸುತ್ತಿರುವ ನನಗೆ ಅಷ್ಟೊಂದು ಹಣ ಜೋಡಿಸಲು ಸಾಧ್ಯವಾಗುತ್ತಿಲ್ಲ ಎಂದರು.

ದಾನಿಗಳು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಜಿ.ಗುರುಪ್ರಸಾದ್, ಖಾತೆ ಸಂಖ್ಯೆ 10590100009316, IFSC : PKGB0010590ಕ್ಕೆ ಹಣ ಹಾಕಬಹುದು ಎಂದವರು ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಗುವಿನ ತಾಯಿ ವಿದ್ಯಾಶ್ರೀ, ಎಸ್.ರಾಜು, ಎಸ್.ವೆಂಟೇಶ್ ಇದ್ದರು.

## ಷೇರುಪೇಟೆಯಲ್ಲಿ ಶೇ.3ರ ಕುಸಿತ

(1ನೇ ಪುಟದಿಂದ) ಹಾಗೂ ಹಾಂಕಾಂಗ್ ಮಾರುಕಟ್ಟೆಗಳಲ್ಲಿ ತೀವ್ರ ಕುಸಿತ ಕಂಡು ಬಂದಿದೆ. ಅಮೆರಿಕದ ಆರ್ಥಿಕತೆಯಲ್ಲಿ ಹಿಂಜರಿತ ಉಂಟಾಗಬಹುದು ಎಂಬ ಕಳವಳ ಹಾಗೂ ಮಧ್ಯ ಪ್ರಾಚ್ಯದ ಬಿಕ್ಕಟ್ಟು ವಿಶ್ವದಾದ್ಯಂತ ಷೇರು ಮಾರುಕಟ್ಟೆಯಲ್ಲಿ ತಲ್ಲಣಕ್ಕೆ ಕಾರಣವಾಗಿದೆ.

ಅಮೆರಿಕದಲ್ಲಿ ಉದ್ಯೋಗಿಗಳ ನೇಮಕ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಅಮೆರಿಕ ಆರ್ಥಿಕ ಹಿಂಜರಿತಕ್ಕೆ ಸಿಲುಕಬಹುದು ಎಂಬ ಕಳವಳ ಹೆಚ್ಚಾಗಿದೆ.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ (ಶ್ರಾವಣ ಮಾಸದ ಪ್ರಯುಕ್ತ ಕೇವಲ 6 ದಿವಸ ಮಾತ್ರ ಈ ರೇಟ್ ) 50x80 ಪಶ್ಚಿಮ, ರೂ. 2,465/- ಅಡಿಗೆ. 40x60 ವೆಸ್ಟ್ (62 ಲಕ್ಷ) 40x60 ಸೌತ್ (61 ಲಕ್ಷ) ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409

**ಸೈಟುಗಳು ಮಾರಾಟಕ್ಕಿವೆ**
ಅಥಣಿ ಕಾಲೇಜ್ ಹತ್ತಿರ MBA ಕಾಲೇಜ್ ರೋಡಿಗೆ 40x60 East, 30x50 Easst, 30x40 East, 30x40 North ಕಮರ್ಷಿಯಲ್ ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರಸ್ತೆ, ಶನೇಶ್ವರ ದೇವಸ್ಥಾನದ ಹಿಂಭಾಗ 30x60 ಉತ್ತರ ಅಕ್ಕ-ಪಕ್ಕ, 30x50 ದಕ್ಷಿಣ-ಪೂರ್ವ ಕಾರ್ನರ್, 30x50 ದಕ್ಷಿಣ ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬಾಡಿಗೆಗಿದೆ**
ದಾವಣಗೆರೆ ಕರೂರು ಇಂಡಸ್ಟ್ರೀಯಲ್ ಏರಿಯಾದಲ್ಲಿ 5500 ಅಡಿವುಳ್ಳ ಇಂಡಸ್ಟ್ರೀಯಲ್ ಶೆಡ್ ಸುಸಜ್ಜಿತ ಆಫೀಸ್‌ನೊಂದಿಗೆ ಬಾಡಿಗೆಗೆ ಇದೆ.
93807 13883

**ಸೆಮಿ ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರಸ್ತೆಗೆ ಹತ್ತಿರದಲ್ಲಿ, ಕೈಗಾರಿಕೆಗಳು, ಗ್ಯಾರೇಜ್, ವರ್ಕ್ ಶಾಪ್ ಅಥವಾ ಮಳಿಗೆಗಳನ್ನು ಮಾಡಬಹುದಾದ 40x68 ರ ಜೋಡಿ ಸೈಟು, 40x70, ಹಾಗೂ 25x88 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
9742434049

**ಹುಡುಗರು ಬೇಕಾಗಿದ್ದಾರೆ**
ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಪ್ತಗಿರಿ ಪೈಪ್ಸ್ ಅಂಡ್ ಟ್ಯಾಪ್ಸ್ ಹದಡಿ ರಸ್ತೆ, ದಾವಣಗೆರೆ.
98446 49626, 90080 58121

**Required Social Media**
MUST BE COMFORTABLE WITH CAMERA
Only for women
SALES/MARKETING PERSON NEED MENS
96061 62212

**ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆಯರು ಸಹಾಯಕಿಯರು, ಪಾರ್ಟ್‌ಟೈಂ ಜಾಬ್ ಮಹಿಳೆಯರು ಬೇಕಾಗಿದ್ದಾರೆ.
88614 38237

**ಮನೆ ಬಾಡಿಗೆಗಿದೆ**
ಜಯನಗರ, ಬಿ ಬ್ಲಾಕ್, ಹರ್ಷ ಗ್ರಾನೈಟ್ ಗಡಿ ಹಿಂಭಾಗ, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ. 1ನೇ ಮಹಡಿಯಲ್ಲಿ 2ಮನೆಗಳು (2BHK) 24x7ನೀರಿನ ಸೌಕರ್ಯವಿದೆ.
99028 49693

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನದ ಹಿಂಭಾಗ 30x40, 30x40 East ಅಕ್ಕ-ಪಕ್ಕ, 30x60 North, Rate - 2600/- 40x50 North, East Corner Rate - 3800/- ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ. ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**WANTED ಬೇಕಾಗಿದ್ದಾರೆ**
Staff Nurse ಸ್ಟಾಫ್ ನರ್ಸ್
97391 19466
95350 75273

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರಸ್ತೆ, ದಾವಣಗೆರೆ. ಸಂಪರ್ಕಿಸಿ :
89048 09492

**ಹುಡುಗರು ಬೇಕಾಗಿದ್ದಾರೆ**
ಗೋಡೌನಿನಲ್ಲಿ ಲೋಡ್-ಅನ್ ಲೋಡ್ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
94817 74321

**WANTED**
Typist/Receptionist for Scanning Diagnostic Centre in Davangere. Qualification Preferably BSc., Contact :
94819 09848

**ಪಿಜಿ ಬಾಡಿಗೆಗಿದೆ**
BIET ಮುಖ್ಯ ರಸ್ತೆಯಲ್ಲಿ PG ಗೆ ಸೂಕ್ತವಾದ ಅಟ್ಯಾಚ್ ಬಾತ್ ರೂಂ ಇರುವ 9 ರೂಮುಗಳು ಬಾಡಿಗೆಗಿವೆ ಸಂಪರ್ಕಿಸಿ.
89707 77554

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ.7.8.2024ರ ಬುಧವಾರ ದಿ.8.8.2024ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗೆ ಇದೆ**
35x40 ಸೈಟ್‌ನಲ್ಲಿ ಹೊಸದಾಗಿ ನಿರ್ಮಿಸಿರುವ 1st floor ನಲ್ಲಿ 2BHK, 2nd floor ನಲ್ಲಿ 1 BHK ಮನೆ ಬಾಡಿಗೆಗೆ ಇದೆ. ಸುಬ್ರಹ್ಮಣ್ಯ ನಗರ, ದಾವಣಗೆರೆ. (S.S. ಹೈಟೆಕ್ ಆಸ್ಪತ್ರೆ ಹತ್ತಿರ)
99729 74858

**ಮನೆ ಬಾಡಿಗೆಗೆ / ಲೀಸ್‌ಗಿದೆ**
# 679 ಕಸ್ತೂರಬಾ ಬಡಾವಣೆ, 9ನೇ ರಸ್ತೆ, ದಾವಣಗೆರೆ. 1 BHK (ಸಸ್ಯಹಾರಿಗಳಿಗೆ ಮಾತ್ರ)
94800 00417

**ಸೈಟು/ಮನೆ/ಹೊಲ ಬೇಕಾಗಿದೆ**
ಸಂಪರ್ಕಿಸಿ :
89707 10578

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಎಸ್.ಎಸ್. ಹೈಟೆಕ್ ಆಸ್ಪತ್ರೆ ರೋಡ್, ಜಯನಗರ, ಬಿ ಬ್ಲಾಕ್, ದಾವಣಗೆರೆ.
99861 62462

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**3 BHK HOUSE FOR RENT/LEASE**
At Uttam Badavane, 1st main, B ward No - 30, Avaragere Road. Contact :
99015 64535
94498 04535

**ವಿಲ್ಲಾ ಸೈಟುಗಳು ಮಾರಾಟಕ್ಕಿವೆ**
ವಿಲ್ಲಾ ಸೈಟುಗಳು, ಫಾರ್ಮ್‌ಹೌಸ್ ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ. 500/- sq.ft ಮಾತ್ರ, ಹರಪನಹಳ್ಳಿ ರಸ್ತೆ, ಮಾಗಾನಹಳ್ಳಿ ಹತ್ತಿರ, ದಾವಣಗೆರೆಯಿಂದ 5 ಕಿ.ಮೀ. ದೂರ.
9591974763, 7892568692

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ. ಪುರುಷ ಅಭ್ಯರ್ಥಿಗಳು ಮಾತ್ರ ಸಂಪರ್ಕಿಸಿ ಎ.ಎನ್.ಎಸ್. ಫುಡ್ಸ್ ಮಂಡಿಪೇಟೆ, ದಾವಣಗೆರೆ.
94482 72734

**ಬೇಕಾಗಿದ್ದಾರೆ**
ವೆಜ್ ಹೋಟೆಲ್‌ನಲ್ಲಿ ಸಪ್ಲೈಯರ್ ಬೇಕಾಗಿದ್ದಾರೆ.
95130 33363

**ಬೇಕಾಗಿದ್ದಾರೆ**
ಮ್ಯಾನೇಜರ್ - Degree - 1
ಆಫೀಸರ್ - Degree - 1
ಕ್ಯಾಷಿಯರ್ - Degree - 1
ಅಟೆಂಡರ್ - SSLC - 1
ಶ್ರೀ ದುರ್ಗಾ ಸಹಕಾರ ಸಂಘ (ಸೊಸೈಟಿ) No. 10 ಹುಲ್ಮನೆ ಹೈಟ್ಸ್, ಕೆನರಾ ಬ್ಯಾಂಕ್ ಕೆಳಗೆ, ಸರಸ್ವತಿ ನಗರ.
97400 32573
ಭೇಟಿಯ ಸಮಯ 11 ರಿಂದ 4 ಗಂಟೆ, ದಿನಾಂಕ 9.8.2024 ರಂದು

**WANTED**
Social Science teacher wanted for High school must be 5 years experienced.
Contact: 97315 55751, 73386 04513
73386 04512

**ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ**
850/- sq.ft ಮಾತ್ರ, ಅಂತಿಮ ಅನುಮೋದನೆಯಾದ ಲೇಔಟ್, ಮಾಗಾನಹಳ್ಳಿ ರಸ್ತೆ, ಅಮೃತ ನಗರ ಹತ್ತಿರ, ದಾವಣಗೆರೆಯಿಂದ 4 ಕಿ.ಮೀ. ದೂರ.
9591974736, 7892568692

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ) LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**WANTED FEMALE TEACHERS**
B.Sc, B.Ed - 2, Maths, Science, Vinayaka convent. Ganeshpet. Behind Kalikadevi Temple, Dvg-1
95356 10817

**REQUIRED**
Lady candidate for office work, Skill: Basic Computer with Photo-shop/ DTP/Accounting PJ Extension, Davanagere
99006 66122

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇರಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WANTED**
Banking Sector Tele Caller (Female Only)
Qualification : Any Degree.
85500 23110
Interview Time - 11AM

**CHANGE OF NAME**
BHADARINATH DASNOOR (old name) S/o SATHYANARAYANA MANVI DASNOOR Resident of # B4/3, Grasim Staff Calony, Kumarapatanam Kawlalettu, Haveri Dist. Karnataka has changed my name as BHADRINATH DASNOOR vide affidavit dated 05.08.2024 sworn before Notary I.P Brahmakumar, Davangere, Henceforth all my transactions and dealings will be in my new name BHADRINATH DASNOOR
Sd/- BHADRINATH DASNOOR

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್ 1000/- Rs. Off ಸೇಲ್ಸ್, ಸರ್ವೀಸ್‌ಗಾಗಿ ಮರುತ್ ಎಂಟರ್ ಪ್ರೈಸಸ್ ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**DOUBLE ROOMS ಮನೆ ಲೀಸ್‌ಗೆ ಇರುತ್ತದೆ**
ಎಲ್ಲಾ ಸೌಲಭ್ಯವುಳ್ಳ ಹೊಸ ಮನೆ ಲೀಸ್‌ಗೆ ಇದೆ. ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ ಅಶೋಕ ನಗರ, ದಾವಣಗೆರೆ.
95356 10817, 74060 70957

**ನಂ.1 ವಶೀಕರಣಂ**
ನೀವು ಇಷ್ಟ ಪಟ್ಟ ಸ್ತ್ರೀ ಪುರುಷ, ಅತ್ತೆ, ಸೊಸೆ ಕಿರಿಕಿರಿ, ಮದುವೆ ವಿಳಂಬ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ ಸಂಭೋಗ ಮೋಹಿನಿ ಮತ್ತು ಕಾಮೇಶ್ವರಿ ಮಂತ್ರದಿಂದ 100% ಪರಿಹಾರ ಶತಃಸಿದ್ಧ. ಕೇವಲ 3 ದಿನಗಳಲ್ಲಿ ಫೋನಿನ ಮೂಲಕ ಪರಿಹಾರ.
ಮೊ : 99644 84508

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

# ಮೀನುಗಾರರ ಆರೋಗ್ಯ ರಕ್ಷಣೆಗೆ ಸಹಕಾರಿ ಯಶಸ್ವಿನಿ ಯೋಜನೆ



**ಹರಪನಹಳ್ಳಿ**

ಹರಪನಹಳ್ಳಿ, ಆ. 5 - ಬಡ ಮೀನುಗಾರನ ಬದುಕು ವಿಪತ್ತಿನಲ್ಲಿದ್ದಾಗ ಸಹಕಾರಕ್ಕೆ ಬರುವುದೇ ಯಶಸ್ವಿನಿ ಯೋಜನೆ ಎಂದು ಜಿಲ್ಲಾ ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಷಡಕ್ಷರಪ್ಪ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯತಿ ಆವರಣದಲ್ಲಿರುವ ಸಾಮರ್ಥ್ಯ ಸೌಧದಲ್ಲಿ ಜಿಲ್ಲಾ ಪಂಚಾಯತ್ ವಿಜಯನಗರ. ಮೀನುಗಾರಿಕೆ ಇಲಾಖೆ ಹರಪನಹಳ್ಳಿ ವತಿಯಿಂದ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಬಗ್ಗೆ ಮೀನು ಕೃಷಿಕರು ಮತ್ತು ಮೀನುಗಾರರ ಸಹಕಾರ ಸಂಘದ ಸದಸ್ಯರ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯಶಸ್ವಿನಿ ಯೋಜನೆ ನಗದು ರಹಿತ ಆರೋಗ್ಯ ವೆಚ್ಚಕ್ಕಾಗಿ ಇರುವಂತಹ ಮಹತ್ತರ ಯೋಜನೆಯಾಗಿದೆ. ಪ್ರತಿಯೊಬ್ಬ ಮೀನುಗಾರರ ಬದುಕಿಗೆ ಭದ್ರ ಬುನಾದಿಯಾಗಲಿರುವ ಆರೋಗ್ಯ ವೆಚ್ಚಕ್ಕಾಗಿ ಐದು ಲಕ್ಷದವರೆಗೆ ದೊರೆಯಲಿರುವ ಯೋಜನೆ ಸದ್ಬಳಕೆಯಾಗಲೇಬೇಕು ಎಂದು ಹೇಳಿದರು.

ಜಿಲ್ಲಾ ಉಪನಿರ್ದೇಶಕ ಶಿವಣ್ಣ ಮಾತನಾಡಿ, ಕಾನೂನು ಬದ್ಧ ಸಹಕಾರ ಸಂಘಗಳಿಗೆ ಮಾತ್ರ ಸರ್ಕಾರಿ ಸೌಲಭ್ಯಗಳು ದೊರೆಯಲಿವೆ ಎಂದು ಹೇಳಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಚಂದ್ರಶೇಖರ್ ಮಾತನಾಡಿ. ಆರೋಗ್ಯವಂತ, ಉತ್ಕೃಷ್ಟ ಆಹಾರ ಮೀನು, ಮಾಂಸಾಹಾರಿಗಳಿಗೆ ಅತ್ಯಂತ ಸರಳ ಮತ್ತು ಉತ್ತಮ ಆರೋಗ್ಯದ ಆಹಾರವಾಗಿದೆ ಎಂದು ತಿಳಿಸಿದರು.

ಮೀನುಗಾರಿಕೆ ಸಹಾಯಕ ನಿರ್ದೇಶಕ ಮಾಲವಿ ರಿಯಾಜ್ ಅಹ್ಮದ್ ಉಪನ್ಯಾಸ ನೀಡಿದರು. ಹರಪನಹಳ್ಳಿ ಸಹಾಯಕ ನಿರ್ದೇಶಕ ಮಂಜುನಾಥ್, ಸಹಕಾರ ಸಂಘಗಳ ನೋಂದಣಿ ಕಚೇರಿಯ ಹಿರಿಯ ನಿರೀಕ್ಷಕರಾದ ಬಸಮ್ಮ ಬಡಿಗೇರ್, ಮೀನುಗಾರಿಕೆ ಇಲಾಖೆ ಸಾವಿತ್ರಮ್ಮ, ಖಾಜಾ ಹುಸೇನ್, ನೀಲಪ್ಪ, ನಾಗೇಂದ್ರಪ್ಪ, ಸಹಕಾರ ಸಂಘಗಳ ಪದಾಧಿಕಾರಿಗಳಾದ ಎನ್. ರವಿ, ತಿಮ್ಮಣ್ಣ, ಎನ್.ಪಿ. ಸಿದ್ದೇಶ್, ಅಂಬಿ ರಾಜಪ್ಪ, ಬಿ. ಶಿವಪ್ಪ, ದ್ಯಾಮಜ್ಜಿ ಹನುಮಂತಪ್ಪ, ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಪ್ಲಾನ್ ಮಾಡಿಕೊಳ್ಳಬೇಕು

## ಮಾಧ್ವ ಪರಿಷತ್ತಿನ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸರ್‌ಎಂವಿ ಕಾಲೇಜಿನ ಸಂಸ್ಥಾಪಕ ಎಸ್.ಜಿ. ಶ್ರೀಧರ್ ಕಿವಿಮಾತು



ದಾವಣಗೆರೆ, ಆ. 5 - ವಿದ್ಯಾರ್ಥಿಗಳು ತಾವು ಯಾವುದನ್ನು ಅಭ್ಯಾಸ ಮಾಡಬೇಕೆಂದು ಪ್ಲಾನ್ ಮಾಡಿಕೊಳ್ಳಬೇಕು. ತಮ್ಮ ಅಭ್ಯಾಸವು ಪರಿಶ್ರಮದಲ್ಲಿ ಬಹಳ ಮುಖ್ಯ, ಮುಂದಿನ ಒಳ್ಳೆಯ ಗುರಿಯನ್ನು ಸಾಧಿಸಬೇಕೆಂದು ಸರ್‌ಎಂವಿ ಕಾಲೇಜಿನ ಸಂಸ್ಥಾಪಕ ಎಸ್.ಜಿ. ಶ್ರೀಧರ್ ಕರೆ ನೀಡಿದರು.

ಸ್ಥಳೀಯ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ಸಭಾಂಗಣದಲ್ಲಿ ವಿಶ್ವ ಮಾಧ್ವ ಮಹಾ ಪರಿಷತ್ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ತಮ್ಮ ವಿದ್ಯಾರ್ಥಿ ಜೀವನವನ್ನು ಮಕ್ಕಳೊಂದಿಗೆ ಹಂಚಿಕೊಂಡ ಅವರು, ನಾನು ಪ್ರತಿ ದಿವಸ ಏನು ಕೆಲಸ ಮಾಡಬೇಕೆಂದು ನೋಟ್ ಮಾಡಿಕೊಳ್ಳುತ್ತಿದ್ದೆ, ಡೈರಿಯನ್ನೂ ಸಹ ಬರೆಯುತ್ತಿದ್ದೆ, ಸರ್ ಎಂ. ವಿಶ್ವೇಶ್ವರಯ್ಯನವರ ಜೀವನ ಹಾಗೂ ಅವರು ನಡೆದ ದಾರಿಯನ್ನಲ್ಲದೇ ಸಾಧನೆಗಳನ್ನು ವಿವರಿಸುವುದರೊಂದಿಗೆ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಮತ್ತೋರ್ವ ಅತಿಥಿಯಾಗಿದ್ದ ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕ ಹಾಗೂ ಬ್ರಾಹ್ಮಣ ಸಮಾಜದ ಮುಖಂಡ ಡಾ. ಸಂಪನ್ನ ಮುತಾಲಿಕ್ ಮಾತನಾಡಿ, ವಿದ್ಯಾರ್ಥಿಗಳು ಕೇವಲ ನಾನು ಇಂಜಿನಿಯರ್, ಡಾಕ್ಟರ್ ಆಗಬೇಕೆಂದುಕೊಳ್ಳದೇ, ಬೇರೆ ಬೇರೆ ಒಳ್ಳೆಯ ಅವಕಾಶ ಇರುತ್ತದೆ. ಅದರ ಕಡೆಗೆ ಗಮನಹರಿಸಿ ಯಾವತ್ತೂ ಸೋಲಿಗೆ ಹೆದರಬೇಡಿ. ಮೊದಲು ನಮಗೆಲ್ಲ ಮುಂದೆ ಗುರಿ ಹಿಂದೆ ಗುರುಗಳು ಇದ್ದರು, ತಮ್ಮ ಯಾವುದೇ ಅಭ್ಯಾಸದಲ್ಲಿ ಪರಿಶ್ರಮ ಬಹಳ ಮುಖ್ಯ ಎಂದು ಹೇಳಿ ನಮ್ಮ ಬ್ರಾಹ್ಮಣ ಸಂಪ್ರದಾಯವನ್ನು ಮರೆಯಬೇಡಿರಿ, ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಿ. ಯಾವುದೇ ಆಶ್ರಮಕ್ಕೆ ಸೇರಿಸಬೇಡಿ ಎಂದು ನೇರವಾಗಿ ಅರ್ಥವಾಗುವಂತೆ ಹೇಳಿದರು.

ಇದೇ ಸಂದರ್ಭದಲ್ಲಿ ಡಾ. ಗೋಪಾಲ ಅಡವಿರಾವ್ ಮುತ್ತಗಿ, ಎನ್.ಕೆ. ಕೃಷ್ಣಮೂರ್ತಿ, ಮಠದ ವ್ಯವಸ್ಥಾಪಕ ರಾಮಗೋಪಾಲ್ ಸಹ ಮಾತನಾಡಿದರು.

ಪುರಸ್ಕಾರದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ 23-24ನೇ ಸಾಲಿನ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳು ಶೇ. 95 ಬಂದಿರುವ ಎಸ್. ತನ್ಮಯಿ, ಎಂ. ಶ್ರೀಕರ ರಾವ್, ಎಂ. ಸಿಂಚನ, ಎನ್. ಶ್ರಾವ್ಯ, ಎಸ್.ಎಂ. ಐಶ್ವರ್ಯ, ಎಂ. ರಚನಾ ದಾಸ್, ಪಿ.ಎಸ್. ಲಾಸ್ಯ, ಎಸ್. ಸಾನ್ನಿಧ್ಯ ಭಟ್, ಶ್ರೀಗೌರಿ ಎಸ್, ವಸಂದರ ಹೆಗಡೆ, ಹೆಚ್. ಸಾಯಿ ತೇಜಸ್ , ಎಸ್. ಸಂಪ್ರೀತ, ಎಸ್. ಸಮ್ಮಿತ್ರಾ ಮುತಾಲಿಕ್ ಅಮೋಘ, ಬಿ. ಅವರುಗಳನ್ನು ಸನ್ಮಾನಿಸಿ ಗೌರವಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಸುತೀರ್ಥ ಕಟ್ಟಿ, ಬೆಂಗಳೂರಿನ ಡಾ. ಎಂ.ಎಸ್. ಹರ್ಷ, ಹುಬ್ಬಳ್ಳಿಯ ಡಾ. ವೆಂಕಟರಾವ್ ಅವರು ಹೆಚ್ಚಿನ ಸಹಕಾರ ನೀಡಿರುತ್ತಾರೆ.

ಜ್ಯೋತಿಷ್ಯ ತಜ್ಞ ಜಯತೀರ್ಥಾಚಾರ್ ಅವರು ವೇದ ಘೋಷ ಮಾಡಿದರು. ಕು. ಸಮ್ಮಿತ್ರಾ, ಮುತಾಲಿಕ್ ಪ್ರಾರ್ಥನೆ ಮಾಡಿದರು. ಕೆಎಫ್‌ಎಸ್ಸಿ ನಾಗರಾಜ್ ಸ್ವಾಗತಿಸಿದರು, ಕೃಷ್ಣ ಚಾರ್ ಮಣ್ಣೂರ್ ಕಾರ್ಯಕ್ರಮವನ್ನು ನಿರೂಪಿಸಿದರು, ಬಿ.ಡಿ. ವೆಂಕಟಗಿರಿ ವಂದಿಸಿದರು.

# ಮಲೇಬೆನ್ನೂರಿನಲ್ಲಿ ಲಯನ್ಸ್ ಪದಾಧಿಕಾರಿಗಳ ಪದಗ್ರಹಣ



ಮಲೇಬೆನ್ನೂರು, ಆ.5- ಲಯನ್ಸ್ ಜಿಲ್ಲೆಯಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್ ತನ್ನ ವಿಶಿಷ್ಟ ಸೇವಾ ಕಾರ್ಯಕ್ರಮಗಳ ಮೂಲಕ ಮಾದರಿ ಕ್ಲಬ್ ಆಗಿದೆ ಎಂದು ಲಯನ್ಸ್ ಜಿಲ್ಲೆಯ ಸದಸ್ಯತ್ವ ಸಂಯೋಜಕ ಬೆಳ್ಳೂಡಿ ಶಿವಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಲಯನ್ಸ್ ಭವನದಲ್ಲಿ ಹಮ್ಮಿಕೊಂಡಿದ್ದ ಮಲೇಬೆನ್ನೂರು ಲಯನ್ಸ್ ಕ್ಲಬ್‌ನ 2024-25ನೇ ಸಾಲಿನ ನೂತನ ಪದಾಧಿಕಾರಿಗಳ ತಂಡವನ್ನು ಪ್ರತಿಷ್ಠಾಪಿಸಿ ಅವರು ಮಾತನಾಡಿದರು.

ಸಂಘ-ಸಂಸ್ಥೆಗಳ ಮೂಲಕ ಮಾಡುವ ಸೇವೆಗೆ ಹೆಚ್ಚು ಮಹತ್ವ ಮತ್ತು ಶಕ್ತಿ ಇದ್ದು, ನಾವು ಲಯನ್ಸ್ ಕ್ಲಬ್‌ಗಳಲ್ಲಿ ಹತ್ತಾರು ಜನ ಸೇರಿ ಸ್ವಲ್ಪ ಹಣ ಹಾಕಿ ಸಾಮೂಹಿಕವಾಗಿ ಜನರಿಗೆ ಅನುಕೂಲವಾಗುವ ಸೇವಾ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ ಎಂದು ಅವರು ತಿಳಿಸಿದರು.

ಈ ವೇಳೆ ಮಲೇಬೆನ್ನೂರು ಲಯನ್ಸ್ ಕ್ಲಬ್ ನೂತನ ಅಧ್ಯಕ್ಷರಾದ ನಿಟ್ಟೂರಿನ ಶ್ರೀಮತಿ ಪಾರ್ವತಮ್ಮ ಇಎಂ ಮರುಳಸಿದ್ದೇಶ್, ಕಾರ್ಯದರ್ಶಿ ನಿಟ್ಟೂರಿನ ಶ್ರೀಮತಿ ರೂಪಾ ಪಾಟೀಲ್, ಖಜಾಂಚಿ ಶ್ರೀಮತಿ ರೋಹಿಣಿ ಬಿ.ಎಂ.ಜಗದೀಶ್ವರ ಸ್ವಾಮಿ ಅವರಿಗೆ ಶಿವಕುಮಾರ್ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಲಯನ್ಸ್ ಮಾಜಿ ಗವರ್ನರ್‌ಗಳಾದ ಡಾ. ಟಿ.ಬಸವರಾಜ್, ಹೆಚ್.ಎನ್.ಶಿವಕುಮಾರ್, ದಾವಣಗೆರೆ ವಿದ್ಯಾನಗರ ಲಯನ್ಸ್ ಕ್ಲಬ್ ಅಧ್ಯಕ್ಷ ಎಲ್.ಎಸ್.ಪ್ರಭುದೇವ್, ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ.ಉಳುವಯ್ಯ, ಡಿಸ್ಟ್ರಿಕ್ ಕೋ - ಆಡಿನೇಟರ್ ಬಿ.ದಿಳ್ಯೆಪ್ಪ ಅವರುಗಳು ನೂತನ ತಂಡವನ್ನು ಅಭಿನಂದಿಸಿ, ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಕ್ಲಬ್ ನಿರ್ಗಮಿತ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ಅವರು, ತಮ್ಮ ಸೇವಾ ಅವಧಿಯಲ್ಲಿ ಕೈಗೊಂಡ ಕಾರ್ಯಕ್ರಮಗಳನ್ನು ಹೇಳಿ, ಸಹಕರಿಸಿದವರಿಗೆ ಧನ್ಯವಾದ ಹೇಳಿದರು.

ಲಯನ್ಸ್ ಕ್ಲಬ್ ನಿರ್ಗಮಿತ ಕಾರ್ಯದರ್ಶಿ ಸಿರಿಗೆರೆ ಸಿದ್ದಪ್ಪ ವಾರ್ಷಿಕ ವರದಿ ಓದಿದರು. ಖಜಾಂಚಿ ಭರ್ಮಪ್ಪ ಮಂಜುನಾಥ್ ಧ್ವಜ ವಂದನೆ ಮಾಡಿದರು.

ಲಯನ್ಸ್ ಕ್ಲಬ್ ಅಧ್ಯಕ್ಷರಾದ ಓ.ಜಿ. ರುದ್ರಗೌಡ್ರು, ಎನ್.ಜಿ.ಶಿವಾಜಿ ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು.

ಎನ್.ಜಿ.ಬಸವನಗೌಡ್ರು, ಬಿ.ಎಂ. ಜಗದೀಶ್ವರ ಸ್ವಾಮಿ, ಇ.ಎಂ.ಮರುಳಸಿದ್ದೇಶ್, ಬೆಣ್ಣೆಹಳ್ಳಿ ಹಾಲೇಶಪ್ಪ, ತಳಸದ ಬಸವರಾಜ್, ಜಿಗಳಿ ಆನಂದಪ್ಪ, ಕುಂಬಳೂರಿನ ಕೆ.ತೀರ್ಥಪ್ಪ, ಹಳೇಮನಿ ಶಂಭುಲಿಂಗಪ್ಪ, ಬಿ.ಕೆಂಪೇಗೌಡ, ಯಲವಟ್ಟಿ ಅಂಜಿನಪ್ಪ, ವೈದ್ಯ ಡಾ. ಇ.ಎಂ. ಸುರೇಂದ್ರ, ಇಂಜಿನಿಯರ್ ಇಟಗಿ ರೇವಣಸಿದ್ದಪ್ಪ, ಪ್ರಗತಿಪರ ಕೃಷಿಕ ಇಟಗಿ ಶಿವಣ್ಣ, ಹಿರಿಯೂರು ಲಯನ್ಸ್ ಕ್ಲಬ್ ಅಧ್ಯಕ್ಷ ವಿಶ್ವನಾಥ್, ಕಾರ್ಯದರ್ಶಿ ಜಗದೀಶ್, ಖಜಾಂಚಿ ಅಶೋಕ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬಾಕಿ ವೇತನಕ್ಕಾಗಿ ಕಾರ್ಮಿಕರ ಒತ್ತಾಯ

**ಕಾರ್ಮಿಕರ ಫೆಡರೇಷನ್ ವತಿಯಿಂದ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಮನವಿ**

ದಾವಣಗೆರೆ, ಆ.5- ಜಿಲ್ಲೆಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕೆಲಸ ಮಾಡುವ ಹೊರಗುತ್ತಿಗೆ ಕಾರ್ಮಿಕರ 5 ತಿಂಗಳ ಬಾಕಿ ವೇತನವನ್ನು ಕೂಡಲೇ ನೀಡಬೇಕೆಂದು ಆಗ್ರಹಿಸಿ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಾರ್ಮಿಕರ ಫೆಡರೇಷನ್ ಇಲಾಖೆಯ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿತು.

ಪ್ರತಿಭಟನಾಕಾರರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಿದರು.

ಈ ವೇಳೆ ಕಾರ್ಮಿಕ ಮುಖಂಡರು ಮಾತನಾಡಿ, ಬಿ.ಕೆ.ಆರ್. ಸರ್ವೀಸ್ ಪ್ರೈವೇಟ್ ಲಿಮಿಟೆಡ್ ಹೊರಗುತ್ತಿಗೆ ಏಜೆನ್ಸಿ ಮೂಲಕ 25ಕ್ಕೂ ಅಧಿಕ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಕಳೆದ 5 ತಿಂಗಳಿಂದ ವೇತನ ನೀಡದೇ ಇರುವುದರಿಂದ ಕುಟುಂಬದ ನಿರ್ವಹಣೆ ಮಾಡಲು ಕಷ್ಟವಾಗುತ್ತಿದೆ ಎಂದು ಅಳಲು ತೋಡಿದರು.

ಈ ಹಿಂದೆ ಭದ್ರತಾ ಸಿಬ್ಬಂದಿಗಳಿಗೆ ಕನಿಷ್ಠ 8 ಗಂಟೆಗಳ ಕಾಲ ಕೆಲಸ, ವೇತನ ಚೀಟಿ, ಇಪಿಎಫ್ ಸೌಲಭ್ಯ ಕಲ್ಪಿಸುವಂತೆ, ಸಾಕಷ್ಟು ಸಲ ಮನವಿ ಮಾಡಿದ್ದರೂ ಸ್ಪಂದಿಸದ ಕಾರಣ ಪ್ರತಿಭಟನೆ ಅನಿವಾರ್ಯವಾಯಿತು ಎಂದರು.

ಕೆಲಸ ಮಾಡುವ ಕಾರ್ಮಿಕರಿಗೆ ಸಮವಸ್ತ್ರ, ಗುರುತಿನ ಚೀಟಿ, ಪ್ರತಿ ತಿಂಗಳು ವೇತನ ಚೀಟಿ ಮತ್ತು ಕೂಡಲೇ 4 ತಿಂಗಳ ವೇತನ ನೀಡಬೇಕೆಂದು ಅಧಿಕಾರಿಗಳಿಗೆ ಒತ್ತಾಯಿಸಿದರು.

ರಜೆ ದಿನಗಳಲ್ಲಿ ಕೆಲಸ ಮಾಡಿಸಿಕೊಂಡಿರುವುದಕ್ಕೆ ತುಟ್ಟಿಭತ್ಯೆ ರೂಪದಲ್ಲಿ ವೇತನ ನೀಡುವುದು ಸೇರಿ ನೇಮಕಾತಿ ದಿನದಿಂದ ಇಲ್ಲಿಯವರೆಗೆ ವೇತನ, ಇಪಿಎಫ್ ಮತ್ತು ಇಎಸ್‌ಐ ಹಣ ಪಾವತಿಸಿದ ಬಗ್ಗೆ ದಾಖಲೆ ನೀಡಬೇಕು ಎಂದು ಆಗ್ರಹಿಸಿದರು.

ಎಐಯುಟಿಯುಸಿ ಜಿಲ್ಲಾಧ್ಯಕ್ಷ ಮಂಜುನಾಥ್ ಕೈದಾಳೆ, ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಕುಕ್ಕುವಾಡ, ಜಿಲ್ಲಾ ಮುಖಂಡ ಅಣಬೇರು ತಿಪ್ಪೇಸ್ವಾಮಿ, ಕಾರ್ಮಿಕರಾದ ಗದಿಗೆಪ್ಪ, ಮುರುಗೇಶಿ, ನರಸಿಂಹ ಮೂರ್ತಿ, ಚನ್ನಬಸವರಾಜ, ಜಯ್ಯಮ್ಮ, ಅಂಜಿನಿ, ಸುಬ್ಬಣ್ಣ, ಬಲರಾಮ ಅರಸು, ನರಸಿಂಹಪ್ಪ, ಚನ್ನಪ್ಪ, ನವೀನ್, ಹರೀಶ್, ಮಾಂತೇಶ್ ಇನ್ನಿತರರಿದ್ದರು.




# ಜೈನ್ ಪಬ್ಲಿಕ್ ಶಾಲೆಯಲ್ಲಿ ಗುರು ಪೂರ್ಣಿಮೆ

ದಾವಣಗೆರೆ, ಆ. 5- ಸಮೀಪದ ಬಾಡಾ ಕ್ರಾಸ್‌ನಲ್ಲಿರುವ ಜೈನ್ ಪಬ್ಲಿಕ್ ಶಾಲೆಯಲ್ಲಿ ಗುರು ಪೂರ್ಣಿಮೆ ಅಂಗವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಕ್ಕಳು ಭಾರತೀಯ ಸಂಸ್ಕೃತಿಯಂತೆ ಎಲ್ಲಾ ಧರ್ಮದ ಗುರುಗಳ ವೇಷಭೂಷಣವನ್ನು ಧರಿಸಿಕೊಂಡು, ಗುರುಗಳ ಮಹತ್ವವನ್ನು ಅವರ ಮುದ್ದು ಮುದ್ದಾದ ಮಾತುಗಳಿಂದ ಎಲ್ಲಾ ಪೋಷಕರ ಮನ ಸೆಳೆದರು. ಜೈನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಅಧ್ಯಕ್ಷ ಅಚಲ್ ಚಂದ್ ಜೈನ್ ಮುಖ್ಯ ಅತಿಥಿಯಾಗಿದ್ದರು. ಶಾಲೆಯ ಪ್ರಾಂಶುಪಾಲ ಎಸ್. ನಟರಾಜ್ ಮತ್ತು ಉಪ ಪ್ರಾಂಶುಪಾಲರಾದ ಎಸ್.ಕೆ. ಯಶೋಧರ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಶಾಲೆಯ 8ನೇ ತರಗತಿ ಮಕ್ಕಳಾದ ಸ್ವಾತಿ ತ್ರಿಪಾಠಿ, ಸೃಜನ್, ಮೇಘನಾ, ಅಧಿತಿ ಮತ್ತು ರಿತಿ ಜೈನ್ ನಡೆಸಿಕೊಟ್ಟರು.

# ನಾಳೆ ವಿದ್ಯಾರ್ಥಿ ಸಂಸತ್ ಪದಗ್ರಹಣ

ದಾವಣಗೆರೆ, ಆ.5- ಪಿಎಲ್‌ಇ ಟ್ರಸ್ಟ್, ಬಿಜೆಎಂ ಸ್ಕೂಲ್ ಮತ್ತು ಬಿ.ಎನ್. ಬಿ. ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ವಿದ್ಯಾರ್ಥಿ ಸಂಸತ್ ಪದಗ್ರಹಣ ಹಾಗೂ ನಾಗರ ಪಂಚಮಿಯ ಪ್ರಯುಕ್ತ ಕಲ್ಲ ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು ಸಪ್ತಾಹದ ಉದ್ಘಾಟನಾ ಸಮಾರಂಭವು ನಾಡಿದ್ದು ದಿನಾಂಕ 7ರ ಬುಧವಾರ ಬೆಳಿಗ್ಗೆ 11ಕ್ಕೆ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ವಹಿಸುವರು. ಜಿ. ಕೊಟ್ರೇಶ್ ಉದ್ಘಾಟಿಸುವರು. ದಿನೇಶ್ ಕೆ.ಶೆಟ್ಟಿ, ಶ್ರೀಮತಿ ವೀಣಾ ಬಕ್ಕೇಶ್, ಎಲ್.ಹೆಚ್. ಸಾಗರ್ ಅವರಿಗೆ ಗೌರವ ಸನ್ಮಾನಿಸಲಾಗುವುದು ಎಂದು ಪಿಎಲ್‌ಇ ಟ್ರಸ್ಟ್ ಕಾರ್ಯದರ್ಶಿ ಕೆ.ಎಸ್. ಮಂಜುನಾಥ್ ಅಗಡಿ ತಿಳಿಸಿದ್ದಾರೆ.

## ವೈಶ್ಯ ಸಮುದಾಯ : ಸಾಲ ಸೌಲಭ್ಯಕ್ಕಾಗಿ ಅರ್ಜಿ

ದಾವಣಗೆರೆ, ಆ.5- ರಾಜ್ಯ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಈ ವೆಬ್‌ಸೈಟ್ ಮೂಲಕ kacdc.karnataka.gov.in ಅರ್ಜಿ ಸಲ್ಲಿಸ ಬಹುದಾಗಿದ್ದು, ಇದೇ ದಿನಾಂಕ 31 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಮಾಹಿತಿಗಾಗಿ 08192230934 ಸಂಪರ್ಕಿಸಿ.

## ಓದುಗರ ಪತ್ರ

### ರಸ್ತೆಗೆ ಹಾಕಿದ ಚರಂಡಿ ಹೊದಿಕೆ ಕಲ್ಲು ಸರಿಪಡಿಸಿ



ಮಾನ್ಯರೇ,

ವಿನೋಬ ನಗರದ 1ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆಯಲ್ಲಿನ ಚರಂಡಿಯ ಮೇಲೆ ಹೊದಿಸಿದ ಕಲ್ಲುಗಳನ್ನು ಪಾಲಿಕೆಯವರು ತೆಗೆದು ರಸ್ತೆಗೆ ಹಾಕಿದ್ದು, 3-4 ತಿಂಗಳು ಕಳೆದರೂ ಅದನ್ನು ಸರಿಪಡಿಸಲು ಪಾಲಿಕೆ ಮುಂದಾಗಿಲ್ಲ.

ಇಂದಿಗೂ ರಸ್ತೆಯಲ್ಲೇ ಇರುವ ಕಲ್ಲುಗಳಿಂದ ಅನೇಕ ಅಪಘಾತಗಳು ಸಂಭವಿಸಿದ್ದು, ಈ ಬಗ್ಗೆ ಪಾಲಿಕೆ ಸಿಬ್ಬಂದಿಗಳಿಗೆ ಸಾಕಷ್ಟು ಸಲ ಮನವಿ ಮಾಡಿದರೂ ನಾಗರಿಕರ ಮಾತು ಅವರ ಕಿವಿಗೆ ತಾಗುತ್ತಿಲ್ಲ. ಕೂಡಲೇ ಕಲ್ಲುಗಳನ್ನು ಚರಂಡಿ ಮೇಲೆ ಹಾಕಿಸಿ, ಸಂಚಾರಕ್ಕೆ ಅಡಚಣೆ ಆಗುತ್ತಿರುವುದನ್ನು ಸರಿಪಡಿಸುವ ಮೂಲಕ ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಡಬೇಕೆಂದು ಪಾಲಿಕೆ ಆಯುಕ್ತರಲ್ಲಿ ವಿನಂತಿ.

- **ಎಚ್. ದಿವಾಕರ್**, ವಕೀಲರು, ದಾವಣಗೆರೆ.

# ನೀರಿನ ಹರಿವು ಕಡಿಮೆಯಾದರೂ ಇಳಿಮುಖವಾಗದ ವೀಕ್ಷಕರು



**ಹರಿಹರ**

ಹರಿಹರ, ಅ.5- ನಗರದ ತುಂಗಭದ್ರಾ ನದಿಯಲ್ಲಿ ಸ್ವಲ್ಪ ಮಟ್ಟಿಗೆ ನೀರಿನ ಪ್ರಮಾಣ ಕಡಿಮೆ ಆಗಿದ್ದು, ಆದರೆ ನದಿಯಲ್ಲಿ ಚಿಕ್ಕ ಚಿಕ್ಕ ಮಕ್ಕಳಿಗೆ ಆಟ ಆಡಿಸೋದು, ಯುವಕ-ಯುವತಿಯರು ಸೆಲ್ಫಿ ಫೋಟೋ ತೆಗೆಸಿಕೊ ಳ್ಳುವುದು ಮಾತ್ರ ನಿಲ್ಲದೇ ನಡೆಯುತ್ತಿರುವುದರಿಂದ ಅನಾಹುತಗಳಿಗೆ ದಾರಿಯಾಗಿದೆ.

ಕಳೆದ 1 ವಾರದಿಂದ ನಗರದ ತುಂಗಭದ್ರಾ ನದಿಯು ಮೈದುಂಬಿಕೊಂಡು ಹರಿಯುತ್ತಿತ್ತು. ಜಿಲ್ಲೆಯಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ನದಿ ವೀಕ್ಷಿಸಿದರು.

ಆದರೆ ನಿನ್ನೆಯಿಂದ ತುಂಗಭದ್ರಾ ನದಿಯ ನೀರಿನ ಪ್ರಮಾಣ ಸ್ವಲ್ಪ ಮಟ್ಟಿಗೆ ಕಡಿಮೆ ಆಗಿದೆ. ಆದರೆ ನದಿ ನೀರು ಕಡಿಮೆ ಆಗುತ್ತಿದ್ದಂತೆ ಪೊಲೀಸ್ ಇಲಾಖೆ ವತಿಯಿಂದ ನದಿ ಪಾತ್ರದಲ್ಲಿ ನಿಯೋಜಿಸಿದ್ದ ಪೊಲೀಸ್ ಸಿಬ್ಬಂದಿಗಳನ್ನು ಬೇರೆ ಕೆಲಸಕ್ಕೆ ನಿಯೋಜಿಸಿದ ಪರಿಣಾಮ ನದಿಯಲ್ಲಿ ಯಾರು ಓಡಾಡದಂತೆ ಓರ್ವ ಟೂರಿಂಗ್ ಪೊಲೀಸ್ ಸಿಬ್ಬಂದಿಯನ್ನು ನಗರದ ತುಂಗಾರತಿ ಸ್ಥಳದಲ್ಲಿ ನಿಯೋಜನೆ ಮಾಡಲಾಗಿದೆ.

ಒಬ್ಬರಿಂದ ಕೆಲಸ ನಿಭಾಯಿಸಲು ಕಷ್ಟ ಆಗುತ್ತಿದ್ದು, ಇತ್ತ ಸಾರ್ವಜನಿಕರು ನದಿ ವೀಕ್ಷಣೆಗೆ ಬರುವ ಚಿಕ್ಕ ಮಕ್ಕಳು, ಸಾರ್ವಜನಿಕರು, ನೀರಿನಲ್ಲಿ ಆಟವಾಡುವವರನ್ನು ಮತ್ತು ಸೆಲ್ಫಿ ತೆಗೆದುಕೊಳ್ಳುವವರನ್ನು ತಡೆಯಲು ಸಾಧ್ಯವಾಗದು. ಈ ಸ್ಥಳದಲ್ಲಿ ಸ್ವಲ್ಪ ಯಾಮಾರಿದ್ರು ನದಿಯಲ್ಲಿ ಅನಾಹುತ ಸಂಭವಿಸಿ ಸಾವಿನಡೆಗೆ ತೆಗೆದುಕೊಂಡು ಹೋಗುವ ಸಂಭವ ಜಾಸ್ತಿ.

ನದಿ ನೀರಿನ ಪ್ರಮಾಣ ಕಡಿಮೆ ಆಗುತ್ತಿದ್ದಂತೆ, ಇತ್ತ ನದಿಯಲ್ಲಿ ಎಂಟು ಹಲ್ಲಿನ ಕುರಿಯೊಂದು ಹರಿದು ಬಂದು ನದಿಯ ದಂಡೆಯ ಮೇಲೆ ತೇಲುತ್ತಿದೆ. ಈ ಕುರಿ ಅಂದಾಜು ಎಂಬತ್ತು ಸಾವಿರ ರೂ. ವೆಚ್ಚ ಇರಬಹುದು ಎನ್ನಲಾಗಿದೆ.

ನದಿಯಲ್ಲಿ ಸೆಲ್ಫಿ ಫೋಟೋ ತೆಗೆಯುವಾಗ ಕೈಯಲ್ಲಿದ್ದ ಮೊಬೈಲ್ ನದಿಯಲ್ಲಿ ಬಿದ್ದ ಪರಿಣಾಮ ಯುವಕನೋರ್ವ ನದಿಯಲ್ಲಿ ಇಳಿದು ಮೊಬೈಲ್ ಹುಡುಕಲು ಮುಂದಾದ್ರು ಸಹಿತ ಮೊಬೈಲ್ ಸಿಗದೆ ಮನೆಗೆ ನಿರಾಸೆಯಿಂದ ಮನೆಗೆ ಹೋದ ಘಟನೆ ಕೂಡ ನಡೆಯಿತು.

## ಈಶ್ವರ ದೇವಸ್ಥಾನದಲ್ಲಿ ಶ್ರಾವಣ ಕಾರ್ಯಕ್ರಮ

ದಾವಣಗೆರೆ, ಆ. 5- ನಗರದ ಶಿವಕುಮಾರಸ್ವಾಮಿ ಬಡಾವಣೆ 1 ನೇ ಹಂತ, 2 ನೇ ಮೇನ್‌ನಲ್ಲಿ ಇರುವ ಶ್ರೀ ಈಶ್ವರ- ವಿನಾಯಕ ದೇವಸ್ಥಾನದಲ್ಲಿ ಶ್ರಾವಣ ಮಾಸದ ಅಂಗವಾಗಿ ಇಂದಿನಿಂದ ಸೆಪ್ಟೆಂಬರ್ 5 ರ ವರೆಗೆ ಒಂದು ತಿಂಗಳ ಕಾಲ ಪ್ರತಿ ದಿನ ಬೆಳಿಗ್ಗೆ ಅಭಿಷೇಕ, ಕುಂಕುಮಾರ್ಚನೆ, ವಿಶೇಷ ಹೂವಿನ ಅಲಂಕಾರ ಇರುತ್ತದೆ ಎಂದು ಈಶ್ವರ ವಿನಾಯಕ ಟ್ರಸ್ಟ್ ಅಧ್ಯಕ್ಷ ಕೆ. ರವೀಂದ್ರಪ್ಪ ಮತ್ತು ಕಾರ್ಯದರ್ಶಿ ಎನ್. ಎಂ. ಗಿರಿಯಪ್ಪ ತಿಳಿಸಿದ್ದಾರೆ.

**ಶಿವ ಸಹಕಾರಿ ಬ್ಯಾಂಕ್ ನಿಯಮಿತ**

ಆಡಳಿತ ಕಚೇರಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-1.

ಫ್ಯಾಕ್ಸ್ ನಂ. 08192 237488, ಫೋನ್ : 08192 256107, 9449819322

**ಸದಸ್ಯರ ಗಮನಕ್ಕೆ**

ಈ ಮೂಲಕ ಬ್ಯಾಂಕಿನ ಅಪೂರ್ಣ ಷೇರು ಹಣ ಹೊಂದಿರುವ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ, ಬ್ಯಾಂಕಿನ ಬೈಲಾ ನಂ. 20 (1) ರನ್ವಯ ಸದಸ್ಯರು ಕನಿಷ್ಠ ಷೇರು ಬಂಡವಾಳ ರೂ. 2000/-ಗಳನ್ನು ಹೊಂದಿರತಕ್ಕದ್ದು. ಇಲ್ಲವಾದಲ್ಲಿ ಸದಸ್ಯನಾಗಿ ಮುಂದುವರೆಯಲು ಅವಕಾಶವಿರುವುದಿಲ್ಲ. ಆದ್ದರಿಂದ ರೂ. 2000/- ಷೇರು ಮೌಲ್ಯಕ್ಕಿಂತ ಕಡಿಮೆ ಷೇರುದಾರರು ಈ ಸೂಚನೆ ಪ್ರಕಟಣೆಯಾದ 15 ದಿವಸಗಳೊಳಗಾಗಿ ಪ್ರಧಾನ ಕಛೇರಿ ಶಾಖೆಯಲ್ಲಿ ತಮ್ಮ ಷೇರು ಹಣವನ್ನು ರೂ. 2000/- ಗಳಿಗೆ ಹೆಚ್ಚಿಸಿಕೊಳ್ಳಲು ವಿನಂತಿಸಲಾಗಿದೆ. ತಪ್ಪಿದಲ್ಲಿ ಸಹಕಾರ ಸಂಘಗಳ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲಾಗುವುದು.

ಸಹಿ/- ಪ್ರಭಾರಿ ಪ್ರಧಾನ ವ್ಯವಸ್ಥಾಪಕರು

# ಮೈಸೂರು ಚಲೋ ಪಾದಯಾತ್ರೆಯಲ್ಲಿ ಅತಿಥ್ ಅಂಬರಕರ್ ಹಾಗೂ ಸಂಗಡಿಗರು



ರಾಜ್ಯ ಸರ್ಕಾರದ ವಿರುದ್ಧ ಭಾರತೀಯ ಜನತಾ ಪಕ್ಷ ಮತ್ತು ಜೆ.ಡಿ.ಎಸ್. ಜಂಟಿಯಾಗಿ ಹಮ್ಮಿಕೊಂಡಿರುವ ಮೈಸೂರ್ ಚಲೋ ಪಾದಯಾತ್ರೆಯಲ್ಲಿ ಭಾ.ಜ.ಪ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಮಾರ್ಗದರ್ಶನದಂತೆ ದಾವಣಗೆರೆ ಜಿಲ್ಲೆಯ ಯುವ ಮೋರ್ಚಾದ ಕಾರ್ಯದರ್ಶಿಯಾಗಿರುವ ಅತಿಥ್ ಅಂಬರಕರ್ ಮತ್ತು ರಾಜ್ಯ ಎಸ್. ಟಿ. ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸಂಗನಗೌಡ್ರು, ಜಿಲ್ಲಾ ಕೋಶಾಧ್ಯಕ್ಷ ಬಾತಿ ವೀರೇಶ್, ಹೊನ್ನಾಳಿಯ ಮುಖಂಡರಾದ ಎ.ಬಿ.ಹನುಮಂತಪ್ಪ, ಚೆನ್ನಪ್ಪ, ಚಿತ್ತಾನಹಳ್ಳಿ ಕರಿಬಸಪ್ಪ, ಶಾಮನೂರು ರಾಜಣ್ಣ, ಕಾಡಜ್ಜಿ ಬಸವರಾಜ್, ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಕುಮಾರ್, ಯುವ ಮೋರ್ಚಾದ ಡಿ.ಟಿ. ವಿಜಯೇಂದ್ರ ಹಾಗೂ ಇತರರು ಭಾಗಹಿಸಿದ್ದರು.

**ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ದಾವಣಗೆರೆ.**

**2023-2024 ನೇ ಸಾಲಿನ 21 ನೇ ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ**

**ದಿನಾಂಕ: 12.08.2024ರ ಸೋಮವಾರ ಮಧ್ಯಾಹ್ನ 12.00 ಘಂಟೆಗೆ ಸರಿಯಾಗಿ ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ** 2023-24ನೇ ಸಾಲಿನ **21ನೇ ವಾರ್ಷಿಕ ಸಾಮಾನ್ಯ ಸಭೆ**ಯನ್ನು ಒಕ್ಕೂಟದ ಅಧ್ಯಕ್ಷರಾದ **ಶ್ರೀ ಸಿರಿಗೆರೆ ರಾಜಣ್ಣರವರ ಅಧ್ಯಕ್ಷತೆಯಲ್ಲಿ ಶ್ರೀ ಷ॥ಬ್ರ॥ ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಟ್ರಸ್ಟ್, ಶಿವಾಚಾರ್ಯ ನಿಕೇತನ ಹಿರೇಮಠ, ಎಂ.ಸಿ.ಸಿ. ಬಿ ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ** ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯ ಸಹಕಾರ ಸಂಘಗಳು ತಮ್ಮ ಸಂಘದ /ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರಲ್ಲಿ ಒಬ್ಬ ಪ್ರತಿನಿಧಿಯನ್ನು ಮಾತ್ರ ಆಯ್ಕೆ ಮಾಡಿ ಸಂಘದ ಠರಾವು ಪ್ರತಿಯಲ್ಲಿ ಪ್ರತಿನಿಧಿಯ ಸಹಿಯೊಂದಿಗೆ ಸಾಮಾನ್ಯ ಸಭೆಗೆ ಸಕಾಲಕ್ಕೆ ಹಾಜರಾಗಲು ಕೋರಿದೆ.

ಮಾನ್ಯ ಸದಸ್ಯ ಸಹಕಾರ ಸಂಘಗಳಿಗೆ, ಈಗಾಗಲೇ ವಾರ್ಷಿಕ ವರದಿ ಪುಸ್ತಕಗಳನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ನೋಟಿಸ್ ತಲುಪದೇ ಇರುವವರು, ಇದನ್ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್ ಎಂದು ಪರಿಗಣಿಸಿ ಹಾಜರಾಗಲು ಕೋರಿದೆ.

**ವಿಶೇಷ ಸೂಚನೆ :** 1) ಒಕ್ಕೂಟದ ಸಾಮಾನ್ಯ ಸಭೆಯಲ್ಲಿ ಅಧಿಕೃತ ಸದಸ್ಯರಿಗೆ ಮಾತ್ರ ಪ್ರವೇಶ.

2) ಸಭೆಗೆ ಬರುವಾಗ ಈ ಸಭೆಯ ತಿಳುವಳಿಕೆ ಪತ್ರಿಕೆಯನ್ನು ಕಡ್ಡಾಯವಾಗಿ ಜೊತೆಯಲ್ಲಿ ತರಬೇಕಾಗಿ ವಿನಂತಿ.

3) ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ ಸಭೆ ನಡೆಯುವ 7 ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಜಿಲ್ಲಾ ಸಹಕಾರ ಒಕ್ಕೂಟದ ಕಛೇರಿಗೆ ಸಲ್ಲಿಸತಕ್ಕದ್ದು.

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ

ಸಹಿ/-

ಸ್ಥಳ : ದಾವಣಗೆರೆ.

ದಿನಾಂಕ :

ಮುಖ್ಯ ಕಾರ್ಯನಿರ್ವಹಣಾಧಿಕಾರಿ,

ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿ., ದಾವಣಗೆರೆ.

# 370ನೇ ವಿಧಿ ರದ್ದತಿಯಿಂದ ಕಾಶ್ಮೀರದಲ್ಲಿ ಸಮೃದ್ಧಿ : ಮೋದಿ



ನವದೆಹಲಿ, ಆ. 5 - ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿ ರದ್ದುಗೊಳಿಸಿದ್ದು ದೇಶದ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು. ಇದರಿಂದಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಅಭಿವೃದ್ಧಿ ಮತ್ತು ಸಮೃದ್ಧಿಯ ಹೊಸ ಯುಗ ಆರಂಭವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್ ಆಶಯಗಳನ್ನು ಈಡೇರಿಸುವ ಸಲುವಾಗಿ ತಮ್ಮ ಸರ್ಕಾರ ಕಾರ್ಯನಿರ್ವಹಿಸುವುದನ್ನು ಮುಂದುವರೆಸಲಿದೆ ಎಂದೂ ಅವರು ಹೇಳಿದ್ದಾರೆ. ಈ ವಿಧಿ ರದ್ದತಿಗೆ ಐದು ವರ್ಷ ತುಂಬಿದ ಸಂದರ್ಭದಲ್ಲಿ ಮೋದಿ ಈ ಹೇಳಿಕೆ ನೀಡಿದ್ದಾರೆ.

370 ನೇ ವಿಧಿ ಹಾಗೂ 35ಎ ವಿಧಿಗಳನ್ನು ರದ್ದುಗೊಳಿಸಿದ ಕಾರಣದಿಂದ ಮಹಿಳೆಯರು, ಯುವಕರು, ಹಿಂದುಳಿದವರು, ಬುಡಕಟ್ಟು ಜನರು ಹಾಗೂ ದಮನಿತ ಸಮುದಾಯಗಳಿಗೆ ಅಭಿವೃದ್ಧಿಯ ಫಲ ದೊರೆತಿದೆ ಎಂದು ಪ್ರಧಾನಿ ಹೇಳಿದರು.

2019ರಲ್ಲಿ ಮೋದಿ ಸರ್ಕಾರ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿಯನ್ನು ರದ್ದುಗೊಳಿಸಿತ್ತು ಹಾಗೂ ಜಮ್ಮು ಮತ್ತು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತು.

# ರಾಜ್ಯ ಹೆದ್ದಾರಿ ಸೇತುವೆ ನಿರ್ಮಾಣಕ್ಕೆ 12 ಕೋಟಿ ರೂ. ಪ್ರಸ್ತಾವನೆ

ಜಗಳೂರು, ಆ. 5- ಶಿಥಿಲಗೊಂಡಿರುವ ಮಲ್ಪೆ-ಮೊಳಕಾಲ್ಮೂರು ರಾಜ್ಯ ಹೆದ್ದಾರಿಯ ಬಿಳಿಚೋಡು ಸೇತುವೆ ನಿರ್ಮಾಣಕ್ಕೆ 12 ಕೋಟಿ ರೂ.ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ತಾಲ್ಲೂಕಿನ ಬಿಳಿಚೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ 'ನಾಡಕಚೇರಿ' ಕಟ್ಟಡ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಅಧಿವೇಶನದ ವೇಳೆ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳೆ ಅವರು ನನ್ನ ಮನವಿಗೆ ಸ್ಪಂದಿಸಿ ಮುಂದಿನ 50 ವರ್ಷ ಭವಿಷ್ಯಕ್ಕೆ ಅನುಕೂಲವಾಗುವಂತೆ 8 ಕೋಟಿಯಿಂದ 12ಕೋಟಿ ಅನುದಾನಕ್ಕೆ ಹೆಚ್ಚಿಸುವ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ದಶಕಗಳಿಂದ ಕಿಷ್ಕಿಂಧೆ ಕೊಠಡಿಗಳಲ್ಲಿ ನಾಡಕಚೇರಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದ ಹಳೇಕಟ್ಟಡ ತೆರವುಗೊಳಿಸಿ 18 ಲಕ್ಷ ರೂ.ವೆಚ್ಚದ ನೂತನ ಕಟ್ಟಡ ನಿರ್ಮಾಣಗೊಂಡಿದೆ. ಸಾರ್ವಜನಿಕರಿಗೆ ರೈತರಿಗೆ ಅನುಕೂಲವಾಗಲಿದೆ ಎಂದರು.

ಸಾರ್ವಜನಿಕರನ್ನು ಅನಗತ್ಯವಾಗಿ ಕಚೇರಿಗೆ ಅಲೆದಾಡಿಸದೆ. ಸಕಾಲದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಮನ್ವಯದಿಂದ ಜನರಿಗೆ ಸ್ಪಂದಿಸಿ



ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ರಾಜಕೀಯ ಮುತ್ಸದ್ಧಿಯನ್ನು ರಾಜ್ಯಕ್ಕೆ ಕೊಡುಗೆಯಾಗಿ ನೀಡಿದ ಹಾಗೂ ಎಲ್ಲಾ ವರ್ಗದವರು ಸಾಮರಸ್ಯದಿಂದ ಜೀವನ ಸಾಗಿಸುತ್ತಿರುವ ಬಿಳಿಚೋಡು

**ಜಗಳೂರಿನ ಶಾಸಕ ಬಿ. ದೇವೇಂದ್ರಪ್ಪ**

ಗ್ರಾಮದಲ್ಲಿ ಶ್ರಾವಣ ಮಾಸದ ಮೊದಲನೇ ವಾರದಂದು ಅಭಿವೃದ್ದಿ ಕೆಲಸಗಳಿಗೆ ಚಾಲನೆ ನೀಡಿರುವುದು ಸಂತಸದ ಸಂಗತಿ ಎಂದು ಶಾಸಕರು ತಿಳಿಸಿದರು.

**ಒಂದು ಕೋಟಿ ರೂ. ವೆಚ್ಚದ ವಾಲ್ಮೀಕಿ ಭವನ ನಿರ್ಮಾಣಕ್ಕೆ ಗುದ್ದಲಿ ಪೂಜೆ :** ಗ್ರಾಮದಲ್ಲಿ ಒಂದು ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸುವ ಶ್ರೀ ವಾಲ್ಮೀಕಿ ಸಮುದಾಯ ಭವನದ ಗುದ್ದಲಿ ಪೂಜೆಯನ್ನು ಶಾಸಕರು ಇದೇ ಸಂದರ್ಭದಲ್ಲಿ ನೆರವೇರಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ, ಉಪ ತಹಶೀಲ್ದಾರ್ ರೂಪ, ಗ್ರಾ.ಪಂ. ಅಧ್ಯಕ್ಷೆ ಚಂದ್ರಮ್ಮ, ಸದಸ್ಯ ಆಜಾಮುಲ್ಲಾ, ಮುಖಂಡರಾದ ಬಿ. ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಪ್ರಕಾಶ್, ಎಂ.ಎಸ್.ಪಾಟೀಲ್, ಓಮಣ್ಣ, ಪಿಡಿಓ ನಂದಿಲಿಂಗೇಶ್ವರ್, ಹರೀಶ್, ಜಯದೇವನಾಯ್ಕ, ರಾಜಸ್ವ ನಿರೀಕ್ಷಕರಾದ ಧನಂಜಯ್, ಕೀರ್ತಿ ಕುಮಾರ್ ಮುಂತಾದವರು ಇದ್ದರು.

# ಕ್ರೆಸ್ಟ್ ಗೇಟ್ ಇಳಿಸದಿದ್ದರೆ ಸರ್ಕಾರವೇ ನೇರ ಹೊಣೆ: ಎಚ್ಚರಿಕೆ



ದಾವಣಗೆರೆ, ಆ. 5- ಭದ್ರಾ ನದಿಯಲ್ಲಿ 16050 ಕ್ಯೂಸೆಕ್ಸ್ ಒಳ ಹರಿವು ಇದ್ದು, ನಾಲೆಗಳಿಗೆ 3000 ಕ್ಯೂಸೆಕ್ಸ್ ನೀರು ಬಿಡುತ್ತಿದ್ದಾರೆ. ಅಣೆಕಟ್ಟಿನಲ್ಲಿ 180 ಅಡಿ ನೀರಿದೆ. ಅಣೆಕಟ್ಟಿಗೆ ಇನ್ನೂ 7 ಟಿಎಂಸಿ ನೀರಿನ ಅಗತ್ಯತೆ ಇದೆ.

ಅಧಿಕಾರಿಗಳು ಕ್ರೆಸ್ಟ್ ಗೇಟು ಮೂಲಕ 15555 ಕ್ಯೂಸೆಕ್ಸ್ ನೀರನ್ನು ನದಿಗೆ ಬಿಡುತ್ತಿದ್ದು, ನಿಲ್ಲಿಸುವಂತೆ ಕಾಡಾ ಅಧ್ಯಕ್ಷರೂ, ಅಧೀಕ್ಷಕ ಇಂಜಿನಿಯರ್‌ಗೆ ದೂರವಾಣಿ ಮೂಲಕ ತಿಳಿಸಿದಾಗ್ಯೂ ಮೇಲಿನವರು ಸಬೂಬು ಹೇಳುತ್ತಿದ್ದಾರೆ.

ಶಿವಮೊಗ್ಗ ಜಿಲ್ಲಾ ಮಂತ್ರಿಗಳಿಗೆ ದೂರವಾಣಿಯಲ್ಲಿ ಸಂಪರ್ಕಿಸಿದರೆ ಕರೆಯನ್ನು ಸ್ವೀಕರಿಸುತ್ತಿಲ್ಲ. ನೀರಾವರಿ ಮಂತ್ರಿಗಳೂ ಕೂಡಲೇ ಇತ್ತ ಗಮನಿಸಿ ಕ್ರೆಸ್ಟ್ ಗೇಟ್ ಇಳಿಸಬೇಕು. ಇಲ್ಲದಿದ್ದರೆ ಮುಂದಾಗುವ ಅನಾಹುತಕ್ಕೆ ಸರ್ಕಾರವೇ ನೇರ ಹೊಣೆಯಾಗಬೇಕಾಗುತ್ತದೆ ಎಂದು ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜ್ ಎಚ್ಚರಿಸಿದ್ದಾರೆ.

# ಮೈತ್ರಿ ಪಾದಯಾತ್ರೆಯಲ್ಲಿ ಶಾಸಕ ಬಿ.ಪಿ. ಹರೀಶ್



ಹರಿಹರ, ಆ. 5- ರಾಜ್ಯದ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲು ರಾಜ್ಯ ಬಿಜೆಪಿ ಬೆಂಗಳೂರಿನಿಂದ ಮೈಸೂರಿಗೆ ಹಮ್ಮಿಕೊಂಡಿರುವ ಪಾದಯಾತ್ರೆಯನ್ನು ಹರಿಹರದ ಬಿಜೆಪಿ ನಗರ ಮತ್ತು ಗ್ರಾಮಾಂತರ ಘಟಕಗಳ ಕಾರ್ಯಕರ್ತರು ಬೆಂಬಲಿಸಿ ಭಾಗವಹಿಸಿದ್ದರು.

ಮೂಡಾ ಹಗರಣದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ನಡೆದಿರುವ ಪಾದಯಾತ್ರೆಯಲ್ಲಿ ಹರಿಹರ ಶಾಸಕ ಬಿ.ಪಿ ಹರೀಶ್, ಚಂದ್ರಶೇಖರ ಪೂಜಾರ್, ನಗರಾಧ್ಯಕ್ಷ ಅಜಿತ್ ಸಾವಂತ್, ಮುಖಂಡರಾದ ರಾಜು ರೋಖಡೆ, ಸಂತೋಷ ಗುಡಿಮನಿ, ಗಿರೀಶ್ ಹಳ್ಳದಕೇರಿ, ಸ್ವಾತಿ ಹನುಮಂತಪ್ಪ, ಫೋಟೋ ಸಂತೋಷ, ಅಂಜಿನಿ ಗುತ್ತೂರು, ನಿರಂಜನ್ ದೀಟೂರು, ಚಂದ್ರು ಪಾಟೀಲ, ಗಣೇಶ್ ಶಿವಾಜಿ ಅನೇಕರು ಭಾಗವಹಿಸಿದ್ದರು.

# ತುಮಕೂರು ವಿವಿಯಿಂದ ರಾಜನಹಳ್ಳಿ ಶ್ರೀಗಳಿಗೆ ಡಾಕ್ಟರೇಟ್




ತುಮಕೂರು, ಆ. 5 - ಹರಿಹರ ತಾಲ್ಲೂಕಿನ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ತುಮಕೂರು ವಿಶ್ವವಿದ್ಯಾಲಯವು ಅಧ್ಯಾತ್ಮಿಕ ಮತ್ತು ಸಾಮಾಜಿಕ ಸೇವೆಯನ್ನು ಪರಿಗಣಿಸಿ ಗೌರವ ಡಾಕ್ಟರೇಟ್ ನೀಡಿದೆ.

ಶ್ರೀಗಳ ಜೊತೆಗೆ, ಕ್ರೀಡೆ ಮತ್ತು ಸಂಸ್ಕೃತಿ ವಿಭಾಗದಲ್ಲಿ ತುಮಕೂರು ಜಿಲ್ಲೆಯ ಸುಗ್ಗನ ಪಾಳ್ಯದ ಎಸ್.ಸಿ. ನಾಗಾನಂದ ಸ್ವಾಮಿ ಹಾಗೂ ಸಮಾಜ ಸೇವಾ ವಿಭಾಗದಲ್ಲಿ ಕೈಗಾರಿಕೋದ್ಯಮಿ ಹೆಚ್.ಜಿ. ಚಂದ್ರಶೇಖರ್ ಅವರುಗಳಿಗೂ ಗೌರವ ಡಾಕ್ಟರೇಟ್ ನೀಡಲು ತುಮಕೂರು ವಿ.ವಿ. ನಿರ್ಧರಿಸಿದೆ.

ನಾಡಿದ್ದು ದಿನಾಂಕ 7ರ ಬುಧವಾರ ಬೆಳಿಗ್ಗೆ 11.30ಕ್ಕೆ ತಮಕೂರು ವಿ.ವಿ. ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿರುವ ತುಮಕೂರು ವಿಶ್ವವಿದ್ಯಾನಿಲಯದ 17ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಇಸ್ರೋ ವಿಶ್ರಾಂತ್ ಅಧ್ಯಕ್ಷ ಡಾ. ಕಿರಣ್‌ಕುಮಾರ್ ಅವರು ರಾಜನಹಳ್ಳಿ ಶ್ರೀಗಳಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆಂದು ತುಮಕೂರು ವಿ.ವಿ. ಕುಲಪತಿ ಪ್ರೊ. ಎಂ. ವೆಂಕಟೇಶ್ವರಲು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

# ಹೊಳಲ್ಕೆರೆಯಲ್ಲಿ ನಾಡಿದ್ದು ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸ್ಮರಣೆ



ಚಿತ್ರದುರ್ಗ, ಆ. 5- ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರ 30 ನೇ ಸ್ಮರಣೋತ್ಸವ ಹಾಗೂ 'ಚಿನ್ಮೂಲಾದ್ರಿ ಚಿತ್ಕಳೆ' ಗ್ರಂಥ ಲೋಕಾರ್ಪಣೆ ಸಮಾರಂಭವು ಇದೇ ದಿನಾಂಕ 8 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಹೊಳಲ್ಕೆರೆ ಒಂಟಿಕಂಬದ ಮುರುಘಾ ಮಠದಲ್ಲಿ ನಡೆಯಲಿದೆ.

# ಎಸ್‌ಐಟಿ ಆರೋಪ ಪಟ್ಟಿಯಲ್ಲಿ ನಾಗೇಂದ್ರ, ದದ್ದಲ್ ಹೆಸರಿಲ್ಲ

ಬೆಂಗಳೂರು, ಆ. 5 - ಮಹರ್ಷಿ ವಾಲ್ಮೀಕಿ ನಿಗಮದ ಕೋಟ್ಯಂತರ ರೂ. ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ, ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರನ್ನು ಹೊರಗಿಟ್ಟು 12 ಮಂದಿ ವಿರುದ್ಧ ಎಸ್‌ಐಟಿ ಪ್ರಾಥಮಿಕ ಚಾರ್ಜ್‌ಶೀಟ್ ಸಲ್ಲಿಸಿದೆ.

ನಿಗಮದ ಇಬ್ಬರು ಅಧಿಕಾರಿಗಳೂ ಸೇರಿದಂತೆ 12 ಮಂದಿ ವಿರುದ್ಧ 187 ಕೋಟಿ ರೂ. ಅಕ್ರಮ ವರ್ಗಾವಣೆ ನಡೆಸಿದ ಆರೋಪ ಹೊರಿಸಿದೆ.

ಅಧಿಕಾರಿಗಳ ಮೂಲಕ ಆಂಧ್ರಪ್ರದೇಶದ 10 ಮಂದಿ ಮಧ್ಯವರ್ತಿಗಳಿಗೆ ಈ ಹಣ ವರ್ಗಾವಣೆಗೊಂಡು ಭಾರೀ ಅವ್ಯವಹಾರಕ್ಕೆ ಕಾರಣವಾಗಿದೆ ಎಂದಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕಲ್ಯಾಣ ಖಾತೆ ಸಚಿವರಾಗಿದ್ದ ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷರಾಗಿದ್ದ ದದ್ದಲ್ ಅವರನ್ನು ಸಂಪೂರ್ಣವಾಗಿ ಆರೋಪ ಪಟ್ಟಿಯಿಂದ ಹೊರಗಿಡಲಾಗಿದೆ.

ಪ್ರಕರಣ ಬಯಲಾಗುತ್ತಿದ್ದಂತೆ ಸರ್ಕಾರ ತನಿಖೆಗೆ ಎಸ್‌ಐಟಿ ರಚನೆ ಮಾಡಿದ್ದಲ್ಲದೆ, ಇಲಾಖೆ ಹೊಣೆ ಹೊತ್ತಿದ್ದ ಸಚಿವ ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷ ದದ್ದಲ್ ಅವರ ರಾಜೀನಾಮೆ ಪಡೆಯಲಾಗಿತ್ತು.

ಇದಾದ ನಂತರ ಎಸ್‌ಐಟಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸುವ ವೇಳೆ ಕಾಂಗ್ರೆಸ್‌ನ ಈ ಇಬ್ಬರನ್ನು ವಿಚಾರಣೆಗೆ ಒಳಪಡಿಸಿ ಬಿಡುಗಡೆಗೊಳಿಸಿತ್ತು.

ಇದರ ಮಧ್ಯೆ ಭಾರೀ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.) ತನಿಖೆ ಆರಂಭಿಸಿ, ಪ್ರಕರಣದ ಆರೋಪಿಗಳ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ವಶ ಪಡಿಸಿಕೊಂಡಿತ್ತು.

ಇ.ಡಿ.ಗೆ ದೊರೆತ ಪ್ರಥಮ ಮಾಹಿತಿ ಆಧಾರದ ಮೇಲೆ ನಾಗೇಂದ್ರ ಅವರನ್ನು ವಶಕ್ಕೆ ಪಡೆದು ನಂತರ ನ್ಯಾಯಾಂಗ ಬಂಧನದಲ್ಲಿರಿಸಿದೆ.

ಕೋಟ್ಯಂತರ ರೂ. ಅವ್ಯವಹಾರಕ್ಕೆ ಸಂಬಂಧಿಸಿದಂತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೀಡಿದ ದೂರಿನ ಹಿನ್ನೆಲೆಯಲ್ಲಿ ಸಿಬಿಐ ಪ್ರತ್ಯೇಕವಾಗಿ ತನಿಖೆ ನಡೆಸುತ್ತಿದೆ.

ಕೇಂದ್ರ ಸ್ವಾಮ್ಯದ ಉನ್ನತ ಸಂಸ್ಥೆಗಳು ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಮಧ್ಯೆಯೇ ಎಸ್‌ಐಟಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

# ಮೆಕ್ಕೆಜೋಳಕ್ಕೆ ಲದ್ದಿಹುಳು ಬಾಧೆ ಕೀಟನಾಶಕ ಬಳಸಲು ಕೃಷಿ ಇಲಾಖೆ ಸಲಹೆ

ದಾವಣಗೆರೆ, ಆ. 5 - ಜಿಲ್ಲೆಯಲ್ಲಿ ಮೆಕ್ಕೆಜೋಳದ ಬೆಳೆಗೆ ಸೈನಿಕ ಹುಳಗಳ ಬಾಧೆ ಹೆಚ್ಚಳವಾಗಿದ್ದು, ನಿರ್ವಹಣೆಗೆ ಇಮಾಮ್ಯಾಕ್ಟಿನ್ ಬೆಂಜೋಯೇಟ್ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಅರ್ಧ ಗ್ರಾಂ ಬೆರೆಸಿ ಸುಳಿಯಲ್ಲಿ ತುಂಬುವಂತೆ ಸಿಂಪರಣೆ ಮಾಡಲು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ಕೀಟ ನಾಶಕವು ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಮತ್ತು ಪರವಾನಿಗೆ ಪಡೆದ ಅಧಿಕೃತ ಕೃಷಿ ಪರಿಕರ ಮಾರಾಟಗಾರರಲ್ಲಿ ಕೂಡ ಲಭ್ಯವಿರುತ್ತದೆ ಎಂದು ಅವರು ತಿಳಿಸಿದ್ದಾರೆ.

# ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಆ.5- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಇದೇ ದಿನಾಂಕ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

# ಹರಿಹರ ನಗರಸಭೆ ಅಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ ಮೀಸಲು



ಹರಿಹರ,ಆ.5-ಇಲ್ಲಿನ ನಗರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸರ್ಕಾರ ಮೀಸಲಾತಿ ಘೋಷಣೆ ಮಾಡಿದ್ದು, ಅಧ್ಯಕ್ಷ ಸ್ಥಾನಕ್ಕೆ ಎಸ್ಸಿ ಮಹಿಳೆ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ಮೀಸಲಾತಿ ನಿಗದಿ ಮಾಡಿದೆ.

ಅದರಂತೆ ನಗರದ 31 ನೇ ವಾರ್ಡಿನ ಜೆಡಿಎಸ್ ಸದಸ್ಯರಾದ ಕವಿತಾ ಮಾರುತಿ ಬೇಡರ್ ಅವರು ಮಾತ್ರ ಎಸ್ಸಿ ಮಹಿಳಾ ಮೀಸಲು ಕ್ಷೇತ್ರದಿಂದ ನಗರಸಭೆ ಸದಸ್ಯರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಅವರು ನಗರಸಭೆ ಅಧ್ಯಕ್ಷರಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

# ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಸಪ್ತಾಹ



ದಾವಣಗೆರೆ,ಆ.5- ನಗರದ ವರ್ತುಲ ರಸ್ತೆಯಲ್ಲಿರುವ ಶ್ರೀ ಸ.ಸ. ಮಾತೋಶ್ರೀ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ವೀಣಾ ಸ್ಥಾಪನೆಯೊಂದಿಗೆ ಶ್ರಾವಣ ಸಾಧನ ಸಪ್ತಾಹವು ಇಂದು ಆರಂಭವಾಯಿತು.

ಇದೇ ದಿನಾಂಕ 19ರ ಸೋಮವಾರ ರಕ್ಷಾಬಂಧನ, 26ರಂದು ರಾತ್ರಿ 12 ಗಂಟೆಗೆ ಶ್ರೀ ಕೃಷ್ಣ ಜನ್ಮಾಷ್ಟಮಿ, 27 ಮಂಗಳವಾರ ಜಾಗರಣೆ ಮತ್ತು 28ರ ಬುಧವಾರ ಮಧ್ಯಾಹ್ನ 12ಗಂಟೆಗೆ ಪುಷ್ಪವೃಷ್ಟಿಗೈಯ್ಯುವ ಕಾರ್ಯಕ್ರಮ ನಂತರ ಮಹಾಪ್ರಸಾದ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಮಂದಿರದ ಸದ್ಭಕ್ತ ಮಂಡಳಿಯ ಪ್ರಕಟಣೆ ತಿಳಿಸಿದೆ.

# ಪತ್ರಿಕಾ ವಿತರಕರ ಸಮ್ಮೇಳನದ ಲಾಂಛನ ಅನಾವರಣ



**ಜಗಳೂರು**

ಜಗಳೂರು,ಆ. 5- ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಕಣ್ವಕುಪ್ಪಿ ಗವಿಮಠದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸೆಪ್ಟೆಂಬರ್ 8ರಂದು ಚಿತ್ರದುರ್ಗದಲ್ಲಿ ಆಯೋಜಿಸಲಾಗಿರುವ ಪತ್ರಿಕಾ ವಿತರಕರ ನಾಲ್ಕನೇ ರಾಜ್ಯಮಟ್ಟದ ಸಮ್ಮೇಳನದ ಲಾಂಛನ ಅನಾವರಣ ಮಾಡಲಾಯಿತು.

ತಪೋಕ್ಷೇತ್ರ ಕಣ್ವಕುಪ್ಪಿ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಎಸ್. ಬಡದಾಳ್, ಕ.ರಾ.ನಿ.ಪ. ಸಂಘದ ಫಕ್ರುದ್ದೀನ್, ಶ್ರೀನಿವಾಸ್, ತಾಲ್ಲೂಕು ಅಧ್ಯಕ್ಷ ಚಿದಾ ನಂದ್, ಹಿರಿಯ ಪತ್ರಕರ್ತ ಕೊಟ್ರೇಶ್, ಜಗಳೂರಿನ ಪತ್ರಿಕಾ ವಿತರಕ ಸಿದ್ದೇಶ್ ಎಸ್. ಮಂಜುನಾಥ್ ಡಿ.ಬಿ., ಮಹಾಂತೇಶ ಎಂ., ದಾವಣಗೆರೆ ಪತ್ರಿಕಾ ವಿತರಕರಾದ ಕೃಷ್ಣಮೂರ್ತಿ ಎ.ಎನ್. ಮತ್ತಿತತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಬಡಾವಣೆ, ಬಿ. ಬ್ಲಾಕ್, ಶಾಂತಿ ನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವುಂಟಾಗಲಿದೆ.

# ಆನೆಕೊಂಡದಲ್ಲಿ ಶ್ರೀ ಬಸವೇಶ್ವರ ಜಾತ್ರೆ



ದಾವಣಗೆರೆ, ಆ.6- ಸಮೀಪದ ಆನೆಕೊಂಡ ಸಮೀಪದ ಶ್ರೀ ಮರಡಿ ಬಸವೇಶ್ವರ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವವನ್ನು ಇದೇ ದಿನಾಂಕ 26 ರ ಕಡೇ ಸೋಮವಾರ ಹಮ್ಮಿಕೊಳ್ಳಲಾಗಿದ್ದು, 24 ರಂದು ಶನಿದೇವರ ಪುರಾಣ ಹಾಗೂ 25ರಂದು ರಾತ್ರಿ 9 ಗಂಟೆಗೆ ಭಜನಾ ಕಾರ್ಯಕ್ರಮವಿರುತ್ತದೆ ಎಂದು ಶ್ರೀ ಮರಡಿ ಬಸವೇಶ್ವರ ಸ್ವಾಮಿ ದೇವಸ್ಥಾನ ಸಮಿತಿ ತಿಳಿಸಿದೆ.

# ಸಂತೇಬೆನ್ನೂರಿನಲ್ಲಿ ಈಶ್ವರೀಯ ವಿಶ್ವ ವಿದ್ಯಾಲಯದಿಂದ ಅರ್ಚಕರಿಗೆ ಅಭಿನಂದನೆ



ಸಂತೇಬೆನ್ನೂರು, ಆ. 5- ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಊರಿನ ದೇವಸ್ಥಾನಗಳ ಅರ್ಚಕರಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸೇವಾ ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಮಮತ ಮಾತನಾಡಿ, ನಮ್ಮ ದೇಶದ ಸನಾತನ ಧರ್ಮದ ಸಂಸ್ಕೃತಿಯನ್ನು ಇದುವರೆಗೂ ಉಳಿಸಿಕೊಂಡು ಬಂದಿರುವ ಕಾರಣ ಜನರು ಶ್ರದ್ಧೆ, ಭಕ್ತಿ, ಪೂಜೆ, ಧ್ಯಾನವನ್ನು ಮಾಡುತ್ತಾ, ತಮ್ಮ ಸಂಕಷ್ಟವನ್ನು ಮರೆಯುತ್ತಾ ಪರಮಾತ್ಮನಲ್ಲಿ ವಿಶ್ವಾಸವಿಟ್ಟು ನಡೆಯುತ್ತಿದ್ದಾರೆ ಎಂದರು.

ಅರ್ಚಕರು ಸಮಾಜ ಸೇವೆ ಮಾಡುತ್ತಾ ಎಲ್ಲರ ಒಳಿತನ್ನು ಬಯಸುತ್ತಾ ಬಂದಿದ್ದಾರೆ. ಜನರೊಳಗಿನ ಶ್ರದ್ಧಾ-ಭಕ್ತಿ, ಪೂಜೆ, ಧ್ಯಾನಕ್ಕೆ ಅರ್ಚಕರ ಕಾಯಕ ನಿಷ್ಠೆಯೇ ಕಾರಣ. ಭಕ್ತ ಸಮೂಹ ತಮ್ಮ ಸಂಕಷ್ಟ ಮರೆಯುತ್ತಾ ಪರಮಾತ್ಮನಲ್ಲಿ ವಿಶ್ವಾಸ ಹೊಂದಿ ಹೊಸ ಜೀವನ ನಡೆಸಲು ಅರ್ಚಕರ ಸೇವೆ ಪ್ರೇರಣದಾಯಕ ಎಂದು ಅವರು ಶ್ಲಾಘಿಸಿದರು.

ಅರ್ಚಕರುಗಳಾದ ಸದಾಶಿವಚಾರ್, ರುದ್ರಸ್ವಾಮಿ, ಮಹೇಶ್ವರಪ್ಪ, ಬಸವರಾಜಪ್ಪ, ವೀರಭದ್ರಾಚಾರ್, ಗಂಗಾಧರ್, ಉಮೇಶ್, ಆನಂದಮೂರ್ತಿ, ಶ್ರೀಮತಿ ಅನಿತಾ, ಸುಶೀಲಮ್ಮ ಅವರುಗಳನ್ನು ಶಾಲು ಹೊದಿಸಿ ಸನ್ಮಾನಿಸುವುದರ ಮೂಲಕ ಅಭಿನಂದಿಸಲಾಯಿತು.

# ಫುಟ್‌ಪಾತ್‌ನಲ್ಲಿ ವ್ಯಾಪಾರ ನಿಷೇಧ

ದಾವಣಗೆರೆ, ಆ. 5 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುವ ಬೀದಿ ಬದಿ ವ್ಯಾಪಾರಿಗಳು ಮತ್ತು ಈ ಹಿಂದೆ ಪಾಲಿಕೆಯಿಂದ ನೋಂದಾಯಿ ಸಲ್ಪಟ್ಟ, ನೋಂದಣಿ ಮಾಡಿಸದೇ ಇರುವ ಬೀದಿ ಬದಿ ವ್ಯಾಪಾರಿಗಳು ನಗರದ ರಸ್ತೆ ಬದಿಗಳಲ್ಲಿ ಪಾದಚಾರಿ ರಸ್ತೆಗಳಲ್ಲಿ ತರಕಾರಿ, ಹಣ್ಣು ಹಂಪಲು, ಹೂವು ಹಾಗೂ ಪೂಜಾ ಸಾಮಗ್ರಿಗಳ ವ್ಯಾಪಾರ ಮಾಡಲು ತಾವು ಬಳಸುವ ತಳ್ಳುವ ಗಾಡಿ, ಪೆಟ್ಟಿಗೆಗಳನ್ನು ವ್ಯಾಪಾರದ ಸ್ಥಳದಲ್ಲಿಯೇ ಶಾಶ್ವತವಾಗಿ ಇಡುತ್ತಿರುವುದ ರಿಂದ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ತಳ್ಳುವ ಗಾಡಿಗಳು, ಮಾರಾಟ ಸಾಮಗ್ರಿಗಳು, ಸಾರ್ವಜನಿಕ ರಸ್ತೆ, ಫುಟ್ ಪಾತ್ ಮೇಲೆ ಕಂಡುಬಂದಲ್ಲಿ ಅವುಗಳನ್ನು ಮತ್ತು ಜಪ್ತಿ ಮಾಡುವ ಜೊತೆಗೆ ದಂಡ ವಿಧಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ, ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ
ಅಭಿವೃದ್ಧಿ
ಸಿಲ್ಕ್ ಇಂಡಿಯಾ® 2024
UP TO 50% OFF
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
3 ರಿಂದ 11 ಆಗಸ್ಟ್ 2024 ರವರೆಗೆ | ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್
ಪಿ.ಬಿ. ರಸ್ತೆ, ದಾವಣಗೆರೆ
ಬಿಹಾರ್:ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್ ಕರ್ನಾಟಕ:ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು ತಮಿಳುನಾಡು:ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ:ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್, ಮಂಗಲಗಿರಿ ಹಾಗೂ ಪೊಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ:ಬನಾರಸ್, ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹಾರಾಷ್ಟ್ರ:ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಒರಿಸ್ಸಾ:ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಛತ್ತೀಸ್‌ಘಡ್:ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ:ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ:ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಜಮ್ಮು ಮತ್ತು ಕಾಶ್ಮೀರ:ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್:ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು
Last 7 Days
Organised by : abhivrudhi
(Registered with O/o D C (H) Ministry of Textiles, Govt. of India)
Entry Free | All Credit & Debit Cards Accepted Contact : 63641 65152



KABBUR EDUCATION SOCIETY (R.)
ವಿನ್ನರ್ಸ್ ಪ್ರಥಮ ದರ್ಜೆ ಕಾಲೇಜು
DAVANAGERE CHOICE OF ACHIEVES
(Recogniszed By Govt. of Karnataka, Affiliated to Davanagere University)
#304 & 324, 2nd Main, Near Stadium, P.J Extension, Davangere.
WANTED

| Sl. No. | Position | Subject | No. of Post |
|---|---|---|---|
| 1 | Lecturer | Computer Science | 02 |
| 2 | Lecturer | Mathematics | 01 |
| 3 | Lecturer | English | 01 |
| 4 | Lecturer | Kannada | 01 |
| 5 | Lecturer | History | 01 |
| 6 | Receptionist cum Typist | Kannada & English Typing | 01 |
| 7 | Marketing Executive | - | 01 |
| 8 | Office Assistant cum Car Driver | - | 01 |
| 9 | Attender / ಆಯಾ | - | 01 |

Attractive Salary, Full Time / Part Time
Send Your C V : Email- winnersfirstgradecollege@gmail.com or
Whats App : 97317 10438, 98869 97892

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas